ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ದಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume:05 ಸಂಪುಟ: 05 | Issue:240 ಸಂಚಿಕೆ: 240 | Date:19-10-2026 Monday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

ಮಹಿಳಾ ದಸರಾದಲ್ಲಿ: ರಂಗೋಲಿ ಸ್ಪರ್ಧೆ– ಮಹಿಳೆಯರ ಹಗ್ಗ ಜಗ್ಗಾಟ; ವಿವಿಧ ಸ್ಪರ್ಧೆಗಳಿಗೆ ಡಿಸಿಎಂ ಚಾಲನೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ತುಮಕೂರು ದಸರಾ ಅಂಗವಾಗಿ ನಗರದ ಮಹಾತ್ಮಗಾಂಧಿ ಕ್ರೀಡಾಂಗಣದ ಒಳಾಂಗಣದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ದಸರಾ ಕಾರ್ಯಕ್ರಮಕ್ಕೆ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಚಾಲನೆ ನೀಡಿದರು.

ಮಹಿಳಾ ದಸರಾ ಕಾರ್ಯಕ್ರಮದಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನೇತೃತ್ವದಲ್ಲಿ ಮಹಿಳೆಯರಿಗಾಗಿಯೇ ರಂಗೋಲಿ, ಹಗ್ಗ–ಜಗ್ಗಾಟ, ಬಲೂನ್ ರೇಸ್, ಲೆಗ್ ಟೈಡ್ ರೇಸ್, ಮ್ಯೂಸಿಕಲ್ ಚೇರ್, ಹೂ ಕಟ್ಟುವುದು ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.





ಜಿಲ್ಲಾಧಿಕಾರಿಗಳಿಂದ ರಂಗೋಲಿ ಸ್ಪರ್ಧೆ ಉದ್ಘಾಟನೆ: ಜಿಲ್ಲಾಧಿಕಾರಿ ಶುಭ ಕಲ್ಯಾಣ್ ರಂಗೋಲಿ ಬಿಡಿಸುವ ಮೂಲಕ ರಂಗೋಲಿ ಸ್ಪರ್ಧೆಯನ್ನು ಉದ್ಘಾಟನೆ ಮಾಡಿದರು. ಮಹಿಳೆಯರು ಬಿಡಿಸಿದ್ದ ಚುಕ್ಕಿ ಹಾಗೂ ಎಳೆ ರಂಗೋಲಿಯ ಚಿತ್ತಾರಗಳನ್ನು ವೀಕ್ಷಿಸಿದ ಸಚಿವರು, ಮಹಿಳೆಯರ ಕಲಾತ್ಮಕತೆಯನ್ನು ಮೆಚ್ಚಿ ಶುಭ ಹಾರೈಸಿದರು. ನಂತರ ಮಾತನಾಡಿದ ಜಿಲ್ಲಾಧಿಕಾರಿ ಮಹಿಳೆಯರು ಮನೆಯೊಳಗೆ ಮಾತ್ರವಲ್ಲ, ಹೊರಗೂ ದುಡಿಯುತ್ತಿರುವುದಲ್ಲದೆ ಕಲಾತ್ಮಕತೆಯಲ್ಲಿಯೂ ಮುಂದಿದ್ದಾರೆ. ಬಿಡಿಸಿರುವ ವಿವಿಧ ರಂಗೋಲಿಗಳನ್ನು ಗಮನಿಸಿದರೆ ಅವರಲ್ಲಿರುವ ಸೃಜನಶೀಲತೆ ತಿಳಿಯುತ್ತದೆ ಎಂದು ಎಲ್ಲರಿಗೂ ಶುಭ ಹಾರೈಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಡಾ.ಸಿದ್ದರಾಮಣ್ಣ ಮಾತನಾಡಿ ತುಮಕೂರುನಗರ ಮಾತ್ರವಲ್ಲದೆ, ವಿವಿಧಕಡೆಗಳಿಂದಲೂ ಹೆಚ್ಚು ಆಸಕ್ತಿ ತೋರಿಸಿ ಚಟುವಟಿಕೆಗಳಲ್ಲಿ ಮಹಿಳೆಯರು ಭಾಗವಹಿಸಿದ್ದಾರೆ. ಮಹಿಳಾ ದಸರಾ ಕಾರ್ಯಕ್ರಮದಡಿ ನಡೆಯುವ ಪ್ರತಿ ಸ್ಪರ್ಧೆಗೂ 3 ಬಹುಮಾನಗಳನ್ನು ವಿತರಿಸಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಮಹಿಳಾಮತ್ತುಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಡಾ.ಸಿದ್ದರಾಮಣ್ಣ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಆರ್. ಜೆ. ಪವಿತ್ರ, ಮಕ್ಕಳ ಅಭಿವೃದ್ಧಿ ಅಧಿಕಾರಿ ಅಂಬಿಕ, ನಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ನಾಗರಾಜು, ಗ್ರಾಮಾಂತರ ಯೋಜನಾಧಿಕಾರಿ ಶಶಿಧರ್, ಜಾಹ್ನವಿ, ಮೊದಲಾದವರು ಇದ್ದರು.

ರಂಗೋಲಿ ಸ್ಪರ್ಧೆಯನ್ನು ಎಳೆ ರಂಗೋಲಿ ಮತ್ತು ಚುಕ್ಕಿ ರಂಗೋಲಿ ಎಂಬ ಎರಡು ವಿಭಾಗಗಳಲ್ಲಿ ಆಯೋಜಿಸಲಾಗಿತ್ತು. ಎರಡೂ ವಿಭಾಗಗಳಲ್ಲಿ ಮಹಿಳೆಯರು ವಿವಿಧ ವಿನ್ಯಾಸಗಳು, ಆಕರ್ಷಕ



ಬಣ್ಣಗಳ ಸಂಯೋಜನೆ ಹಾಗೂ ಸಾಂಪ್ರದಾಯಿಕ ಕಲಾ ಪ್ರಕಾರಗಳನ್ನು ಬಳಸಿಕೊಂಡು ಮನಮೋಹಕ ರಂಗೋಲಿಗಳನ್ನು ರಚಿಸಿ, ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಈ ಸ್ಪರ್ಧೆಯಲ್ಲಿ 150ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು.

ನಾಡಹಬ್ಬದ ಸಾಂಸ್ಕೃತಿಕ ಸಂಭ್ರಮಕ್ಕೆ ಮತ್ತಷ್ಟು ಮೆರುಗು ನೀಡಿದ ಈ ಸ್ಪರ್ಧೆಯು ಮಹಿಳೆಯರಲ್ಲಿನ ಸುಪ್ತ ಪ್ರತಿಭೆಯನ್ನು ಗುರುತಿಸುವುದರ ಜೊತೆಗೆ, ಸಾಂಪ್ರದಾಯಿಕ ರಂಗೋಲಿ ಕಲೆಯ ಸಂರಕ್ಷಣೆ ಮತ್ತು ಪ್ರೋತ್ಸಾಹಕ್ಕೆ ವೇದಿಕೆಯಾಯಿತು. ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ರಂಗೋಲಿಯ ವಿವಿಧ ಚಿತ್ತಾರಗಳನ್ನು ವೀಕ್ಷಿಸಿದರು.

ಎಲ್ಲಾ ಶಾಲೆಗಳಲ್ಲೂ ನ.1ರಂದೇ ಕನ್ನಡ ರಾಜ್ಯೋತ್ಸವ ಕಡ್ಡಾಯ: ಆಚರಣೆ ತಪ್ಪಿಸುವಂತಿಲ್ಲ

ಸೂರ್ಯಪ್ರಗತಿನ್ಯೂಸ್.ಕಾಂ

1956ರ ನವೆಂಬರ್ 1 ರಂದು ಕನ್ನಡ ಮಾತನಾಡುವ ಪ್ರದೇಶಗಳನ್ನು ಒಗ್ಗೂಡಿಸಿ ಮೈಸೂರು ರಾಜ್ಯವನ್ನು ರಚಿಸಲಾಯಿತು, ಇದನ್ನು 1973ರಲ್ಲಿ 'ಕರ್ನಾಟಕ' ಎಂದು ಮರುನಾಮಕರಣ ಮಾಡಲಾಯಿತು. ಈ ದಿನವನ್ನು ಕನ್ನಡ ರಾಜ್ಯೋತ್ಸವವಾಗಿ ಆಚರಿಸಲಾಗುತ್ತದೆ, ಇದು ಕರ್ನಾಟಕ ಏಕೀಕರಣ, ಭಾಷೆ, ಸಂಸ್ಕೃತಿಯನ್ನು ಗೌರವಿಸುತ್ತದೆ. ಹೀಗಾಗಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಕಡ್ಡಾಯಗೊಳಿಸಿ ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ. ಅಲ್ಲದೇ ಕಟ್ಟುನಿಟ್ಟಿನ ಸೂಚನೆಗಳನ್ನೂ ಸಹ ನೀಡಿದೆ.

ನವೆಂಬರ್ 1ರಂದು ಭಾನುವಾರ ಬಂದರೂ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲೇಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ. ಈ ಕುರಿತು ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದ್ದು, ರಜೆ ನೆಪದಲ್ಲಿ ಆಚರಣೆ ತಪ್ಪಿಸುವಂತಿಲ್ಲ. ವಾರದ ರಜೆಯ



ಕಾರಣಕ್ಕೆ ಆಚರಣೆಯಿಂದ ವಿನಾಯಿತಿ ಪಡೆಯಲು ಅವಕಾಶವಿಲ್ಲ ಎಂದು ಖಡಕ್ ಸೂಚನೆ ನೀಡಿದೆ. ಅಲ್ಲದೇ ಕನ್ನಡದ ಹಬ್ಬ ಆಚರಣೆಯಲ್ಲಿ ಯಾವುದೇ ನಿರ್ಲಕ್ಷ್ಯಕ್ಕೆ ಅವಕಾಶವಿಲ್ಲ ಎಂದು ಆದೇಶದಲ್ಲಿ ತಿಳಿಸಿದೆ.

ನ.1ರಂದೇ ಕನ್ನಡ ರಾಜ್ಯೋತ್ಸವ ಆಚರಣೆ

ನಾಡಹಬ್ಬವಾದ ಕನ್ನಡ ರಾಜ್ಯೋತ್ಸವವನ್ನು ಪ್ರತಿವರ್ಷ ನವೆಂಬರ್ 1ರಂದು ಆಚರಿಸಲಾಗುತ್ತದೆ. ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವ ಈ ದಿನವನ್ನು ಶಾಲೆಗಳಲ್ಲಿ ಅರ್ಥಪೂರ್ಣವಾಗಿ ಆಚರಿಸುವಂತೆ ಇಲಾಖೆ ಸೂಚಿಸಿದೆ. ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳು, ಅನುದಾನಿತ ಶಾಲೆಗಳು ಮತ್ತು ಖಾಸಗಿ ಶಾಲೆಗಳು ಈ ಸೂಚನೆಯನ್ನು ಪಾಲಿಸಬೇಕು. ರಾಷ್ಟ್ರೀಯ ಹಬ್ಬಗಳು, ಕರ್ನಾಟಕ ರಾಜ್ಯೋತ್ಸವ ಹಾಗೂ ಪ್ರಮುಖ ಜಯಂತಿಗಳನ್ನು ನಿಗದಿತ ದಿನಗಳಂದೇ ನಿಯಮಾನುಸಾರ ಆಚರಿಸಬೇಕು ಎಂದು ಇಲಾಖೆ ತಿಳಿಸಿದೆ. ಈ ಬಾರಿ ರಾಜ್ಯೋತ್ಸವ ಭಾನುವಾರ ಬಂದಿರುವುದರಿಂದ ಶಾಲೆಗಳಿಗೆ ಪ್ರತ್ಯೇಕ ವಿನಾಯಿತಿ ನೀಡಲಾಗಿಲ್ಲ. ಹೀಗಾಗಿ ನವೆಂಬರ್ 1ರಂದೇ ಶಾಲೆಗಳಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗುತ್ತದೆ.

ಕನ್ನಡ ರಾಜ್ಯೋತ್ಸವವು ಕೇವಲ ಆಚರಣೆಯ ದಿನವಲ್ಲ, ಕನ್ನಡ ಭಾಷೆ, ನೆಲ ಮತ್ತು ಸಂಸ್ಕೃತಿಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಸಂದರ್ಭವೂ ಹೌದು. ಈ ಹಿನ್ನೆಲೆಯಲ್ಲಿ ರಜಾದಿನವಾಗಿದ್ದರೂ ರಾಜ್ಯೋತ್ಸವ ಆಚರಣೆಯನ್ನು ತಪ್ಪಿಸಬಾರದು ಎಂಬ ನಿಲುವನ್ನು ಶಿಕ್ಷಣ ಇಲಾಖೆ ಸ್ಪಷ್ಟಪಡಿಸಿದೆ.

ಖಾಸಗಿ ಶಾಲೆಗಳಿಂದ ವಿಶೇಷ ಆಚರಣೆಗೆ ನಿರ್ಧಾರ

ಈ ಆದೇಶ ಬೆನ್ನಲ್ಲೇ ಖಾಸಗಿ, ಅನುದಾನಿತ ಶಾಲೆಗಳು, ಕನ್ನಡ ರಾಜ್ಯೋತ್ಸವವನ್ನು ವಿಶೇಷವಾಗಿ ಆಚರಿಸಲು ಮುಂದಾಗಿದ್ದು, ಕನ್ನಡ ರಾಜ್ಯೋತ್ಸವದ ವಿಶೇಷ ಉಡುಗೆ ಧರಿಸಲು ಮಕ್ಕಳಿಗೆ ಸೂಚನೆ ನೀಡಲಾಗಿದೆ. ಹೌದು..ನವೆಂಬರ್ 1ರಿಂದ ಒಂದು ವಾರ ಕರ್ನಾಟಕದ ಸಂಸ್ಕೃತಿ ಬಿಂಬಿಸುವ ಉಡುಗೆ ತೊಡಲು ಸೂಚನೆ ನೀಡಲಾಗಿದೆ. ಕರ್ನಾಟಕದ ಸಿಹಿ ತಿಂಡಿ, ತಿನಿಸು ಹಂಚಿ ಒಂದು ವಾರಗಳ ಕಾಲ ರಾಜ್ಯೋತ್ಸವ ಆಚರಣೆಗೆ ಮುಂದಾಗಿದ್ದು, ಶಾಲೆಗಳ ಸೂಚನೆ ಪಾಲಿಸುವಂತೆ ಪೋಷಕರಿಗೂ ಮನವಿ ಮಾಡಿವೆ. ಈ ಮೂಲಕ ಕನ್ನಡ ನಾಡು, ನುಡಿ, ಸಂಸ್ಕೃತಿ ಪರಿಚಯಿಸಲು ಖಾಸಗಿ ಶಾಲೆಗಳು ಮಹತ್ವದ ಹೆಜ್ಜೆ ಇಟ್ಟಿವೆ.



ದಸರಾ, ವಿಜಯದಶಮಿ ಪ್ರಯುಕ್ತ
ಅ.20–21ರಂದು ಸೂರ್ಯಪ್ರಗತಿ
ದಿನಪತ್ರಿಕೆಗೆ ರಜೆ–– ಸಂಪಾದಕರು

ಜಿಲ್ಲೆಯ ಅಭ್ಯುದಯಕ್ಕಾಗಿ
ಉಪಮುಖ್ಯಮಂತ್ರಿಗಳಿಂದ ವಿಶೇಷ ಪೂಜೆ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜಿಲ್ಲೆಯ ಅಭ್ಯುದಯಕ್ಕಾಗಿ ಉಪಮುಖ್ಯಮಂತ್ರಿ ಡಾ: ಜಿ. ಪರಮೇಶ್ವರ ಅವರು ತಮ್ಮ ಧರ್ಮ ಪತ್ನಿ ಕನ್ನಿಕಾಪರಮೇಶ್ವರಿ ಅವರೊಂದಿಗೆ ಇಂದು ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ದಸರಾ ಉತ್ಸವ ಪ್ರಯುಕ್ತ ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಪ್ರತಿಷ್ಠಾಪಿಸಿರುವ ಕಾಳರಾತ್ರಿ ಅಲಂಕಾರದಲ್ಲಿದ್ದ ಚಾಮುಂಡೇಶ್ವರಿ ದೇವಿಯನ್ನು ಅವರು ಪೂಜಿಸಿ ಜಿಲ್ಲೆಯಲ್ಲಿ ಉತ್ತಮ ಮಳೆ–ಬೆಳೆಗಾಗಿ ಪ್ರಾರ್ಥನೆ ಸಲ್ಲಿಸಿದರು.

ಭೂ ದಾಖಲೆಗಳ ಇಲಾಖೆ ಉಪನಿರ್ದೇಶಕಿ ಭಾವನಾ ಬಸವರಾಜ್ ಹಾಗೂ ಪತಿ ತಿಪಟೂರು ತಾಲ್ಲೂಕು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಭರತ್ ದಂಪತಿ, ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಎನ್.ಕೆ. ರವಿ ಹಾಗೂ ಪತ್ನಿ ಪವಿತ್ರ ದಂಪತಿ, ಅರ್ಚಕರ ಸಂಘದ ಅಧ್ಯಕ್ಷ ರಾಮತೀರ್ಥನ್ ಸೇರಿದಂತೆ ಜಿಲ್ಲೆಯ ವಿವಿಧ ಅಧಿಕಾರಿ/ಸಿಬ್ಬಂದಿ ಹಾಗೂ ಭಕ್ತಾದಿಗಳು ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

'ಪಂಜಿನ ಕವಾಯತು'
250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೈಯಲ್ಲಿ ಪಂಜು



ತುಮಕೂರು ದಸರಾ ಉತ್ಸವದ ಸಂಭ್ರಮಕ್ಕೆ ಭವ್ಯ ಮೆರುಗು ನೀಡಿ, ದೇಶಭಕ್ತಿಯ ಕಿಚ್ಚು ಹೊತ್ತಿಸಿ, ಮೈಮನಗಳಲ್ಲಿ ರೋಮಾಂಚನ ಮೂಡಿಸಿದ ಅದ್ಭುತ ಕ್ಷಣಗಳಿಗೆ ಸಾಕ್ಷಿ, ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 'ಪಂಜಿನ ಕವಾಯತು' ವೀಕ್ಷಿಸಿದ್ದು ಅವಿಸ್ಮರಣೀಯ ಅನುಭವ. ಕತ್ತಲನ್ನು ಸೀಳಿ ಬೆಳಗಿದ ನೂರಾರು ಪಂಜುಗಳ ಜ್ಯೋತಿ, ದೇಶಭಕ್ತಿಯ ಭಾವವನ್ನು ಮೊಳಗಿಸಿದ ಪೊಲೀಸ್ ಬ್ಯಾಂಡ್‌ನ ಸಂಗೀತ, ಶಿಸ್ತಿನ ಹೆಜ್ಜೆಗಳೊಂದಿಗೆ ಮೈದಾನದಲ್ಲಿ ಮೂಡಿಬಂದ ಆಕರ್ಷಕ ಅಕ್ಷರಾಕೃತಿಗಳು ನೋಡುಗರ ಮೈನವಿರೇಳಿಸುವಂತೆ ಮಾಡಿದವು.

ಜಿಲ್ಲೆಯ ಎನ್‌ಸಿಸಿ, ಎನ್‌ಎಸ್‌ಎಸ್, ಸ್ಕೌಟ್ಸ್ ಮತ್ತು ಗೈಡ್ಸ್ ಸೇರಿದಂತೆ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೈಯಲ್ಲಿ ಪಂಜು ಹಿಡಿದು ಹೆಜ್ಜೆ ಹಾಕಿದ ದೃಶ್ಯ ಮೈನವಿರೇಳಿಸುವಂತಿತ್ತು. ನೂರಾರು ಜ್ಯೋತಿಗಳು ಒಂದಾಗಿ ಬೆಳಗಿದಾಗ ಮೂಡಿದ ಆ ದೃಶ್ಯ ಕಣ್ಣಿಗೆ ಹಬ್ಬವಾಗಿದ್ದಷ್ಟೇ ಅಲ್ಲ, ಹೃದಯದಲ್ಲಿ ಹೆಮ್ಮೆ ಮತ್ತು ಅಭಿಮಾನವನ್ನು ತುಂಬಿತು ಎಂದು ಡಿಸಿಎಂ ಡಾ. ಜಿ. ಪರಮೇಶ್ವರ್



ತುಮಕೂರು ದಸರಾ ಅಂಗವಾಗಿ ನಡೆದ ಕಾರು ಮತ್ತು ಬೈಕ್ ರ್‍ಯಾಲಿಗೆ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ರವರ ಪತ್ನಿ, ಕನ್ನಿಕಾ ಪರಮೇಶ್ವರ್ ಚಾಲನೆ ನೀಡಿದರು. ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಜಿ.ಪಂ. ಸಿಇಓ ಬಿ.ವಿ. ಅಶ್ವಿಜ ಮತ್ತಿತರರು ಭಾಗವಹಿಸಿದ್ದರು. ಬೈಕ್ ರ್‍ಯಾಲಿ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಿಂದ ನಗರದ ಪ್ರಮುಖ ರಸ್ತೆಯಲ್ಲಿ ಸಾಗಿತು.




ಮುಖ್ಯಮಂತ್ರಿಯೂ ಬಲಿಪಶುವಾಗಿರಬಹುದು, ರಾಜಕೀಯ ನಾಯಕತ್ವ ನಿಯಂತ್ರಣಕ್ಕೆ ಸ್ಟಿಂಗ್ ಆಪರೇಷನ್ ವಿಡಿಯೋ ಬಳಕೆ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ

ಬೆಂಗಳೂರು: ಮುಖ್ಯಮಂತ್ರಿ ಸೇರಿದಂತೆ ರಾಜ್ಯದ ರಾಜಕೀಯ ನಾಯಕತ್ವವನ್ನು 'ಸ್ಟಿಂಗ್ ಆಪರೇಷನ್' (ರಹಸ್ಯ ಕಾರ್ಯಾಚರಣೆ) ವಿಡಿಯೋ ಬಳಸಿ ನಿಯಂತ್ರಣದಲ್ಲಿಡಲು ಕರ್ನಾಟಕದಲ್ಲಿ ಒಂದು ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ ಎಂದು ಕೇಂದ್ರ ಸಚಿವ ಹಾಗೂ ಜೆಡಿ(ಎಸ್) ನಾಯ ಎಚ್.ಡಿ. ಕುಮಾರಸ್ವಾಮಿ ಶನಿವಾರ ಆರೋಪಿಸಿದ್ದಾರೆ.

ರಾಜ್ಯವ್ಯಾಪಿ ಪ್ರತಿಭಟನೆಗಳ ಸಾಧ್ಯತೆ ಸೇರಿದಂತೆ, ಪಕ್ಷದ ಮುಂದಿನ ಕಾರ್ಯತಂತ್ರಗಳ ಬಗ್ಗೆ ನಿರ್ಧರಿಸಲು ಅವರು ಜೆಡಿ(ಎಸ್) ನಾಯಕರ ಸಭೆಯನ್ನು ಕರೆದಿದ್ದರು. ಸಾಮಾನ್ಯವಾಗಿ ತಮ್ಮ ರಾಜಕೀಯ ಎದುರಾಳಿ ಡಿ.ಕೆ. ಶಿವಕುಮಾರ್ ಅವರನ್ನು ಗುರಿಯಾಗಿಸಿಕೊಳ್ಳುತ್ತಿದ್ದ ಎಚ್.ಡಿ. ಕುಮಾರಸ್ವಾಮಿ, ಈ ಬಾರಿ ಅವರ ಬಗ್ಗೆಯೇ ಅನುಮಾನ ವ್ಯಕ್ತಪಡಿಸಿದರು; ಏಕೆಂದರೆ, ಡಿ.ಕೆ. ಶಿವಕುಮಾರ್ ಕೂಡ ಈ 'ಸ್ಟಿಂಗ್ ಆಪರೇಷನ್'ನ ಬಲಿಪಶುವಾಗಿರಬಹುದು ಎಂದು ಅವರು ಅಭಿಪ್ರಾಯಪಟ್ಟರು. 'ಸ್ಟಿಂಗ್ ಆಪರೇಷನ್' ಹಿಂದಿರುವ ಪ್ರಮುಖ ಸೂತ್ರಧಾರನ ವಿರುದ್ಧ ಕ್ರಮ ಕೈಗೊಳ್ಳುವಂತೆ ಬೆಂಗಳೂರು ಪೊಲೀಸ್ ಆಯುಕ್ತರಿಗೆ ಕುಮಾರಸ್ವಾಮಿ ನೀಡಿದ್ದ ಎರಡು ದಿನಗಳ ಗಡುವು ಶನಿವಾರ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಈ ಸಭೆ ನಡೆದಿದೆ.

ಲೋಕ ಭವನದಲ್ಲಿ ನೂತನ ರಾಜ್ಯಪಾಲರನ್ನು ಭೇಟಿಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕುಮಾರಸ್ವಾಮಿ, ಪಕ್ಷದ ನಾಯಕರ ಅಭಿಪ್ರಾಯಗಳನ್ನು ಪಡೆದ ನಂತರ ಮುಂದಿನ ನಡೆ ಬಗ್ಗೆ ನಿರ್ಧರಿಸಲಾಗುವುದು ಎಂದು ಹೇಳಿದರು. ಜೆಡಿ(ಎಸ್) ಈ ವಿಷಯವನ್ನು ವೈಯಕ್ತಿಕ ದ್ವೇಷದಿಂದ ಎತ್ತುತ್ತಿಲ್ಲ, ಬದಲಾಗಿ ಕರ್ನಾಟಕದ ಜನರ ಕಡೆಗಿನ ತನ್ನ ಜವಾಬ್ದಾರಿಯಿಂದಾಗಿ ಎತ್ತುತ್ತಿದೆ ಎಂದು ಅವರು ಒತ್ತಿ ಹೇಳಿದರು.

"ಈ ವಿಡಿಯೋವನ್ನು ಬ ಳ ' ಸಿ ಕ ' ೂ ಂ ಡ ' ು



ಮುಖ್ಯಮಂತ್ರಿ ಮತ್ತು ಇತರರನ್ನು ಕೈಗೊಂಬೆಗಳನ್ನಾಗಿ ಮಾಡಲಾಗುತ್ತಿರುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ" ಎಂದು ಆರೋಪಿಸಿದ ಅವರು, ರಾಜ್ಯದ ರಾಜಕೀಯ ನಾಯಕತ್ವವನ್ನು ನಿಯಂತ್ರಣದಲ್ಲಿಡಲು ಈ ವಿಡಿಯೋವನ್ನು ಬಳಸಲಾಗುತ್ತಿದೆ ಎಂದು ಮಾರ್ಮಿಕವಾಗಿ ಹೇಳಿದ್ದಾರೆ. 'ಸ್ಟಿಂಗ್ ಆಪರೇಷನ್ ಬಿಸಿ': ಮೈಸೂರಿನಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಭೇಟಿ ಮಾಡಿದ ಸಿಎಂ ಕೆ ಶಿವಕುಮಾರ್;

ಮಾಧ್ಯಮ ಸಂಸ್ಥೆಗಳ ಹೆಸರನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಮತ್ತು ಪತ್ರಿಕೋದ್ಯಮದ ಘನತೆಗೆ ಧಕ್ಕೆ ತರಲಾಗುತ್ತಿದೆ ಎಂದು ಆರೋಪಿಸಿದ ಕುಮಾರಸ್ವಾಮಿ, ಇಂತಹ ಚಟುವಟಿಕೆಗಳಿಗೆ ಅಂತ್ಯ ಹಾಡಬೇಕು ಎಂದು ಆಗ್ರಹಿಸಿದರು. ಕರ್ನಾಟಕದ ಮಾಧ್ಯಮ ರಂಗದಲ್ಲಿ ಉನ್ನತ ಮಾನದಂಡಗಳನ್ನು ಸ್ಥಾಪಿಸಿದ ಪತ್ರಕರ್ತರು ಮತ್ತು ಸಂಪಾದಕರ ಕೊಡುಗೆಯನ್ನು ಸ್ಮರಿಸಿದ ಅವರು, ಪತ್ರಿಕೋದ್ಯಮದ ವಿಶ್ವಾಸಾರ್ಹತೆಯನ್ನು ಮರುಸ್ಥಾಪಿಸುವ ಅಗತ್ಯವಿದೆ ಎಂದು ಹೇಳಿದರು. ಸರ್ಕಾರ ನಡೆಸುತ್ತಿರುವವರು ಇದೇ ರೀತಿಯ ಹಿನ್ನೆಲೆಯಿಂದ ಬಂದಿರುವುದರಿಂದ, ಈ ಸಮಸ್ಯೆಯನ್ನು ಬಗೆಹರಿಸುವ ಇಚ್ಛಾಶಕ್ತಿ ಸರ್ಕಾರಕ್ಕಿಲ್ಲ ಎಂದು ಅವರು ಆರೋಪಿಸಿದರು.

ಜವಾಬ್ದಾರರ ವಿರುದ್ಧ ಕೈಗೊಳ್ಳಬೇಕಾದ ಕಾನೂನು ಕ್ರಮಗಳು ಮತ್ತು ಸಾರ್ವಜನಿಕ ಹೋರಾಟಗಳ ಬಗ್ಗೆ ಜೆಡಿ(ಎಸ್) ಸಭೆಯಲ್ಲಿ ಚರ್ಚಿಸಲಾಗುವುದು ಎಂದು ತಿಳಿಸಿದ ಕುಮಾರಸ್ವಾಮಿ, ಸಮಾಲೋಚನೆಯ ನಂತರ ಪಕ್ಷ ತನ್ನ ಮುಂದಿನ ಕಾರ್ಯಯೋಜನೆಯನ್ನು ನಿರ್ಧರಿಸಲಿದೆ ಎಂದು ಹೇಳಿದರು.

ದೇಶದ ವ್ಯವಸ್ಥೆಯನ್ನು ಸರಿದಾರಿಗೆ ತರಲು ಯುವಕರು ನಮ್ಮೊಂದಿಗೆ ಇರಬೇಕು: ವಿ.ಸೋಮಣ್ಣ





ಮಧುಗಿರಿ: ದೇಶದಲ್ಲಿಂದು ಅರಾಜಕತೆ ಸೃಷ್ಟಿಸಲು ಹಲವು ಶಕ್ತಿಗಳು ಕುತಂತ್ರ ನಡೆಸುತ್ತಿದ್ದು ದೇಶದ ವ್ಯವಸ್ಥೆ ಸರಿದಾರಿಗೆ ತರಲು ಯುವಕರು ನಮ್ಮೊಂದಿಗೆ ಇರಬೇಕು ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಮನವಿ ಮಾಡಿದರು.

ಪಟ್ಟಣದಲ್ಲಿ ಗ್ರಾಮ ದೇವತೆ ದಂಡಿನ ಮಾರಮ್ಮನಿಗೆ ಪೂಜೆ ಸಲ್ಲಿಸಿ ಹಲವು ಶಾಲಾ ಕಾಲೇಜುಗಳ ಸಂಪರ್ಕಿಸಿ ವಕೀಲರ ಸಂಘಕ್ಕೆ ಭೇಟಿ ಎನ್.ಡಿ.ಎ ಅಭ್ಯರ್ಥಿ ಕೆ.ಎಂ.ಸುರೇಶ್ ರವರ ಪರವಾಗಿ ಮತಯಾಚಿಸಿ ಮಾತನಾಡಿದ ಅವರು ಕೇಂದ್ರ ಸರ್ಕಾರ ದೇಶದ ಯಾವುದೇ ರಾಜ್ಯವನ್ನು ಸಮಾನವಾಗಿ ಕಾಣುತ್ತಿದ್ದು ಪ್ರಧಾನಿ ನರೇಂದ್ರ ಮೋದಿಯವರು ಅಭಿವೃದ್ಧಿಗೆ ಮಾತ್ರ ಮಣೆಹಾಕುತ್ತಿದ್ದಾರೆ. ನಿಮ್ಮ ಮತ ವ್ಯರ್ಥವಾಗದಂತೆ ನಾನೂ ಕೂಡ ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ಸಾವಿರಾರು ಕೋಟಿ ಅನುದಾನ ತಂದು ಕೆಲಸ ಮಾಡುತ್ತಿದ್ದೇನೆ. ನಮ್ಮ ಎನ್.ಡಿ.ಎ. ಪಕ್ಷವು ಯುವಕರಿಗೆ ನಾಯಕತ್ವ ನೀಡುವ ಪಕ್ಷಗಳು. ಅದರ ಭಾಗವಾಗಿ ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿರುವ ಕೆ.ಎಂ.ಸುರೇಶ್ ರವರನ್ನು ಅಭ್ಯರ್ಥಿಯಾಗಿಸಿದ್ದು ನಿಮ್ಮೆಲ್ಲರ ಆಶೀರ್ವಾದ ಅವರಿಗೆ ಮತಗಳ ಮೂಲಕ ಸಿಗಬೇಕು. ಈ ಮೂಲಕ ಅಭಿವೃದ್ಧಿಗೆ ಹಾಗೂ ದುಷ್ಟರ ದಮನಕ್ಕೆ ಸಹಕಾರ ನೀಡಲು ಕೆ.ಎಂ.ಸುರೇಶ್ ರವರಿಗೆ ಮೊದಲ ಪ್ರಾಶಸ್ತ್ಯದ ಮತಗಳನ್ನು ನೀಡುವಂತೆ ಮನವಿ ಮಾಡಿದರು.

> ದೇಶದಲ್ಲಿ ಅರಾಜಕತೆ ಸೃಷ್ಟಿಸಲು ವಿದೇಶಿ ಶಕ್ತಿಗಳ ಜೊತೆಗೆ ಹಲವರು ಕೈ ಜೋಡಿಸಿದ್ದು ಭಾರತೀಯತೆ ಹಾಳುಮಾಡಲು ಹೊರಟಿದ್ದಾರೆ. ಅವರಿಗೆ ತಕ್ಕ ಉತ್ತರ ಕೊಡಲು ವಿದ್ಯಾವಂತರಾದ ನಿಮಗೆ ಇದೊಂದು ಸದಾವಕಾಶ. ಅದನ್ನು ಸದ್ಬಳಕೆ ಮಾಡಿಕೊಂಡು ಆ ದುಷ್ಟಶಕ್ತಿಗೆ ತಕ್ಕ ತಿರುಗೇಟು ನೀಡಲು ಎನ್ ಡಿ ಎ ಅಭ್ಯರ್ಥಿಗೆ ಮತ ನೀಡಿ.
>
> - ವಿ.ಸೋಮಣ್ಣ, ಕೇಂದ್ರ ಸಚಿವರು

ಎಂಎಲ್ಸಿ ಚಿದಾನಂದ ಎಂ. ಗೌಡ ಮಾತನಾಡಿ ಇದೇ ಅ.23 ರಂದು ಆಗ್ನೇಯ ಪದವೀಧರರ ಕ್ಷೇತ್ರಕ್ಕೆ ನಡೆಯುವ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿಯ ಎನ್ ಡಿ ಎ ಅಭ್ಯರ್ಥಿಯಾಗಿ ಕೆ.ಎಂ.ಸುರೇಶ್ ಕಣದಲ್ಲಿದ್ದು ನೀವು ನನಗೆ ನೀಡಿದ ಸಹಕಾರದಂತೆ ಸುರೇಶ್ ರವರಿಗೂ ಬೆಂಬಲಿಸಬೇಕು ಎಂದು ಮನವಿ ಮಾಡಿದ ಗೌಡರು, ಸುರೇಶ್ ರವರು ಹಲವು ವಿದ್ಯಾಸಂಸ್ಥೆ ನಡೆಸುತ್ತಿದ್ದು, ಸಮಾಜಸೇವೆ ಮಾಡುತ್ತಾ ಬಿಜೆಪಿಯ ಕಾರ್ಯಕರ್ತರಾಗಿದ್ದಾರೆ. ಈಗ ಜೆಡಿಎಸ್ ಹಾಗೂ ಬಿಜೆಪಿ ಹೊಂದಾಣಿಕೆಯ ಅಭ್ಯರ್ಥಿಯಾಗಿ ಸುರೇಶ್ ಕಣದಲ್ಲಿದ್ದು ಅವರ ಗೆಲುವು ಬಹಳ ಮುಖ್ಯವಾಗಿದೆ. ಯುವಜನತೆ ಕ್ರಮ ಸಂಖ್ಯೆ–2 ರ ಮುಂದೆ 1 ಎಂದು ಬರೆಯುವುದರ ಮೂಲಕ ಮತದಾನ ಮಾಡಬೇಕೆಂದು ಮನವಿ ಮಾಡಿದರು. ಜೆಡಿಎಸ್ ಮುಖಂಡ ತುಮುಲ್ ನಿರ್ದೇಶಕ ಕೊಂಡವಾಡಿ ಚಂದ್ರಶೇಖರ್, ತಾಲೂಕು ಅಧ್ಯಕ್ಷ ಬಿಜವರ ಶ್ರೀನಿವಾಸ್ ಮಾತನಾಡಿದರು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಅಧ್ಯಕ್ಷ ವೈ.ಎನ್.ಹುಚ್ಚಯ್ಯ, ಜಿಲ್ಲಾ ಬಿಜೆಪಿ ಅಧ್ಯಕ್ಷ ರವಿಹೆಬ್ಬಾಕ, ಬಿಜೆಪಿ ಮುಖಂಡ ಎಲ್.ಸಿ.ನಾಗರಾಜ್, ತುಮುಲ್ ನಿರ್ದೇಶಕ, ಜೆಡಿಎಸ್ ಮುಖಂಡ ಕೊಂಡವಾಡಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷ ಬಿಜವರ ಶ್ರೀನಿವಾಸ್, ವಕೀಲರ ಸಂಘದ ಅಧ್ಯಕ್ಷ ಶಿವಣ್ಣ, ಉಪಾಧ್ಯಕ್ಷ ಅಶ್ವತ್ಥನಾರಾಯಣ್, ಕಾರ್ಯದರ್ಶಿ ನರಸೇಗೌಡ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಡಾ.ಕೆ.ಎಸ್. ಪಾಂಡುರಂಗಾರೆಡ್ಡಿ, ತಾಲೂಕು ಅಧ್ಯಕ್ಷ ಹನುಮಂತರೆಡ್ಡಿ, ವಕೀಲೆ ಹಾಗೂ ಮಧುಗಿರಿ ಮಂಡಲ ಬಿಜೆಪಿ ಮಹಿಳಾ ಮೋರ್ಚ ಅಧ್ಯಕ್ಷೆ ಸ್ವರ್ಣಾಂಬಿಕಾ, ಮಾಜಿ ಜಿ.ಪಂ. ಸದಸ್ಯ ಎನ್.ಡಿ.ಕೃಷ್ಣಪ್ಪ, ಪುರಸಭೆ ಮಾಜಿ ಸದಸ್ಯ ಎಂ.ಆರ್.

ಜಗಣ್ಣ, ಇತರೆ ವಕೀಲರು ಸೇರಿದಂತೆ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಮೋಹನ್ ರಾಜ್, ರಮೇಶ್, ಮುಖಂಡರಾದ ಟಿ.ಜಿ.ಗೋವಿಂದರಾಜು, ನಾಗರಾಜ್, ಅಶೋಕ್, ನಾಗೇಂದ್ರ, ತುಂಡೋಟಿ ರಾಮಾಂಜಿ, ಇತರೆ ವಕೀಲರು ಜೊತೆಗಿದ್ದರು.

ತುಮಕೂರು ಮಹಾನಗರ ಪಾಲಿಕೆಯ ಅಧಿಕಾರಿಗಳ ನಿವಾಸ, ಕಚೇರಿ ಮೇಲೆ ಲೋಕಾಯುಕ್ತ ದಾಳಿ

ತುಮಕೂರು: ಮಹಾನಗರ ಪಾಲಿಕೆಗೆ ಸೇರಿದ ಕೋಟ್ಯಂತರ ರೂಪಾಯಿ ಮೌಲ್ಯದ 9 ನಿವೇಶನಗಳನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿಗಳಿಗೆ ಪಿ.ಐ.ಡಿ ಸಂಖ್ಯೆ ಹಾಗೂ ಖಾತೆ ಮಾಡಿಕೊಟ್ಟು, ಸ



ರ್ಕಾರಿ ಬೊಕ್ಕಸಕ್ಕೆ ನಷ್ಟವುಂಟು ಮಾಡಿದ್ದ ಅಧಿಕಾರಿಗಳ ನಿವಾಸಗಳು ಹಾಗೂ ಮಹಾನಗರ ಪಾಲಿಕೆಯ ಕಂದಾಯ ಉಪ ಆಯುಕ್ತರ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿ ದಾಳಿ ಮಾಡಿದ್ದಾರೆ.

ತುಮಕೂರು ಮಹಾನಗರ ಪಾಲಿಕೆಗೆ ಸೇರಿದ ಕೋಟ್ಯಂತರ ರೂಪಾಯಿ ಮೌಲ್ಯದ 9 ನಿವೇಶನಗಳನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿಗಳಿಗೆ ಪಿ.ಐ.ಡಿ ಸಂಖ್ಯೆ ಹಾಗೂ ಖಾತೆ ಮಾಡಿಕೊಟ್ಟು, ಸರ್ಕಾರಿ ಬೊಕ್ಕಸಕ್ಕೆ ನಷ್ಟವುಂಟು ಮಾಡಿದ್ದ ಅಧಿಕಾರಿಗಳ ನಿವಾಸಗಳು ಹಾಗೂ ಮಹಾನಗರ ಪಾಲಿಕೆಯ ಕಂದಾಯ ಉಪ ಆಯುಕ್ತರ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ಪರಿಶೀಲಿಸಿದ್ದಾರೆ.

ಪ್ರಕರಣದ ಹಿನ್ನೆಲೆ ಮತ್ತು ಆರೋಪ: ತುಮಕೂರಿನ ಶಾಂತಿನಗರದ ನಿವಾಸಿ ಮಂಜುನಾಥ್ ಜಿ. ಎಂಬುವರು ನೀಡಿದ ದೂರಿನನ್ವಯ ಈ ಕ್ರಮ ಕೈಗೊಳ್ಳಲಾಗಿದ್ದು, 1988ರಲ್ಲಿ ಭೂ ಸ್ವಾಧೀನವಾಗಿ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಗರದ ಶಿರಾ ಗೇಟ್ ಬಳಿ 'ಐ.ಡಿ.ಎಸ್.ಎಂ.ಟಿ' ಲೇಔಟ್ ನಿರ್ಮಾಣಗೊಂಡಿತ್ತು. ಈ ಪೈಕಿ ವಾರ್ಡ್ ನಂಬರ್–2 ಮತ್ತು 3ರ ನಿವೇಶನ ಸಂಖ್ಯೆ 589 ರಿಂದ 597 ರವರೆಗಿನ ಒಟ್ಟು 09 ನಿವೇಶನಗಳು ತುಮಕೂರು ಮಹಾನಗರ ಪಾಲಿಕೆಗೆ ಸೇರಿದ ಸ್ವತ್ತುಗಳಾಗಿದ್ದವು.

2017ನೇ ಸಾಲಿನಲ್ಲಿ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಈ ಸ್ವತ್ತುಗಳ ಪಿ.ಐ.ಡಿ ಸಂಖ್ಯೆಗಳನ್ನು ಬ್ಲಾಕ್ ಮಾಡಿ, ಯಾವುದೇ ದಾಖಲಾತಿಗಳಿಲ್ಲದಿದ್ದರೂ ನಿಯಮಬಾಹಿರವಾಗಿ ಹೊಸದಾಗಿ ಪಿ.ಐ.ಡಿ ಸಂಖ್ಯೆಗಳನ್ನು ಸೃಷ್ಟಿಸಿದ್ದರು. ಈ ಮೂಲಕ ಖಾಸಗಿ ವ್ಯಕ್ತಿಗಳಾದ ಬಿ. ದಾದಯ್ಯ ಹಾಗೂ ಅವರ ಮಕ್ಕಳಾದ ಬಿ.ಡಿ.ಶುಭಾ ಮತ್ತು ಬಿ.ಡಿ.ಸುಮಾ ಎಂಬುವರ ಹೆಸರಿಗೆ ಅಕ್ರಮವಾಗಿ ಖಾತೆ ಮಾಡಿಕೊಟ್ಟು ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ನಷ್ಟ ಉಂಟುಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ದೂರಿನ ಅನ್ವಯ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ (ಮೊ.ಸಂ: 11/2026) ಐ.ಪಿ.ಸಿ ಕಲಂ 409, 420 ರ ಜತೆಗೆ 120(ಬಿ) ಹಾಗೂ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು.

ಆರೋಪಿತ ಅಧಿಕಾರಿಗಳ ವಿವರ: ಮಹಾನಗರ ಪಾಲಿಕೆ ನಿವೃತ್ತ ದ್ವಿತೀಯ ದರ್ಜೆ ಸಹಾಯಕ ಶ್ರೀನಿವಾಸಮೂರ್ತಿ ಜಿ.ಎನ್., ಪ್ರಭಾರ ಕಂದಾಯ ನಿರೀಕ್ಷಕ ಶಂಕರಪ್ಪ, ಕಂದಾಯ ಅಧಿಕಾರಿ ರತ್ನಮ್ಮ ಎಲ್.ಎನ್., ಪ್ರಭಾರ ಕಂದಾಯ ಉಪ ಆಯುಕ್ತ ತುಕಾರಾಂ ಬಿ. ನಾಯಕ್, ಆಯುಕ್ತ ಮಂಜುನಾಥ್ ಆರೋಪಿತ ಅಧಿಕಾರಿಗಳಾಗಿದ್ದಾರೆ.

6 ತಂಡಗಳಿಂದ ದಿಢೀರ್ ದಾಳಿ: ಲೋಕಾಯುಕ್ತ ಎಸ್ ಪಿ ಬಿ. ಮಲ್ಲೇಶ್ ಮಾರ್ಗದರ್ಶನದಲ್ಲಿ, ಪೊಲೀಸ್ ಉಪಾಧೀಕ್ಷಕರಾದ ಮಂಜುನಾಥ್ ಎಂ. ಮತ್ತು ಸಂತೋಷ್ ಕೆ.ಎಂ. ಹಾಗೂ ಇನ್‌ಸ್ಪೆಕ್ಟರ್‌ಗಳಾದ ನಿರ್ಮಲ ವಿ., ರಾಜು ಟಿ., ರಾಘವೇಂದ್ರ ಜಿ.ಕೆ. ಮತ್ತು ಸುನಿಲ್‌ಕುಮಾರ್ ಎಚ್.ಎಸ್. ಅವರ ನೇತೃತ್ವದಲ್ಲಿ 6 ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಈ ತಂಡಗಳು ಗುರುವಾರ ಆರೋಪಿಗಳ ವಾಸದ ಮನೆಗಳು ಹಾಗೂ ತುಮಕೂರು ಮಹಾನಗರ ಪಾಲಿಕೆಯ ಕಂದಾಯ ಉಪ ಆಯುಕ್ತರ (ವಲಯ–1) ಕಚೇರಿಯ ಮೇಲೆ ಏಕಕಾಲಕ್ಕೆ

ಮುಸ್ಲಿಂ ಸಮುದಾಯ ಕೇವಲ ಕಾಂಗ್ರೆಸ್‌ಗೆ ಸೀಮಿತವಲ್ಲ!: ಅಡ್ವೋಕೇಟ್ ಬರೀದ್



ತಿಪಟೂರು: ಮುಸ್ಲಿಂ ಸಮುದಾಯದ ರಾಜಕೀಯ ಆಯ್ಕೆಗಳು ಕೇವಲ ಒಂದು ಪಕ್ಷಕ್ಕೆ ಸೀಮಿತವಾಗಿರಬಾರದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಅಡ್ವೋಕೇಟ್ ಬರೀದ್, ವಿಧಾನ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ ತಮ್ಮ ರಾಜಕೀಯ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

2026ರ ಕರ್ನಾಟಕ ಆಗ್ನೇಯ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಅಡ್ವೋಕೇಟ್ ಬರೀದ್, ತಿಪಟೂರಿನ ಖಾಸಗಿ ಹೋಟೆಲ್‌ನಲ್ಲಿ ಪತ್ರಿಕಾಗೋಷ್ಠಿ ನಡೆಸಿ ತಮ್ಮ ಸ್ಪರ್ಧೆ ಹಾಗೂ ಉದ್ದೇಶಗಳ ಕುರಿತು ಮಾತನಾಡಿದರು.

2026ರ ವಿಧಾನ ಪರಿಷತ್ ಚುನಾವಣೆಯ ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಅಡ್ವೋಕೇಟ್ ಬರೀದ್ ಅವರು ಸ್ಪರ್ಧೆಗೆ ಇಳಿದಿರುವ ಹಿನ್ನೆಲೆಯಲ್ಲಿ ತಿಪಟೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅಡ್ವೋಕೇಟ್ ಬರೀದ್, ಮುಸ್ಲಿಂ ಸಮುದಾಯದ ರಾಜಕೀಯ ಭಾಗವಹಿಸುವಿಕೆ ಹಾಗೂ ಪದವೀಧರರ ಸಮಸ್ಯೆಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಮುಸ್ಲಿಂ ಸಮುದಾಯದವರು ಕೇವಲ ಒಂದು ರಾಜಕೀಯ ಪಕ್ಷಕ್ಕೆ ಸೀಮಿತವಾಗದೆ, ತಮ್ಮ ಹಕ್ಕುಗಳು, ಪ್ರಾತಿನಿಧ್ಯ ಹಾಗೂ ಅಭಿವೃದ್ಧಿಯ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳಬೇಕು ಎಂಬ ಸಂದೇಶವನ್ನು ತಮ್ಮ ಹೇಳಿಕೆಯ ಮೂಲಕ ಮುಂದಿಟ್ಟರು. ಪದವೀಧರ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಅವರು, ಪದವೀಧರರ ಸಮಸ್ಯೆಗಳು, ಶಿಕ್ಷಣ, ಉದ್ಯೋಗಾವಕಾಶಗಳು ಹಾಗೂ ಕ್ಷೇತ್ರದ ಅಭಿವೃದ್ಧಿಯಂತಹ ವಿಚಾರಗಳಿಗೆ ಆದ್ಯತೆ ನೀಡುವ ಉದ್ದೇಶ ಹೊಂದಿರುವುದಾಗಿ ತಮ್ಮ ಪ್ರಚಾರದ ಮೂಲಕ ತಿಳಿಸಿದ್ದಾರೆ.

ಇನ್ನು ಪತ್ರಿಕಾಗೋಷ್ಠಿಯಲ್ಲಿ ನವೀನ್, ಆದರ್ಶ, ಜಮೀರ್, ಸಪ್ಪರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಾತ್ಯಾಯನಿ ದೇವಿಗೆ ವಿಶೇಷ ಪೂಜೆ



ತುಮಕೂರು: ಜಿಲ್ಲಾಡಳಿತದ ವತಿಯಿಂದ ಆಯೋಜಿಸಲಾಗಿರುವ ನಾಡಹಬ್ಬ ತುಮಕೂರು ದಸರಾ?2026ರ ಅಂಗವಾಗಿ ನವರಾತ್ರಿಯ ಆರನೇ ದಿನದ ಪ್ರಯುಕ್ತ ಶ್ರೀ ಕಾತ್ಯಾಯನಿ ದೇವಿಗೆ ವಿಶೇಷ ಪೂಜೆ ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ಸಾಂಪ್ರದಾಯಿಕವಾಗಿ ನೆರವೇರಿಸಲಾಯಿತು.

ನವರಾತ್ರಿಯ ಆರನೇ ದಿನ ಆರಾಧಿಸಲ್ಪಡುವ ಕಾತ್ಯಾಯನಿ ದೇವಿಯು ದುರ್ಗಾದೇವಿಯ ಆರನೇ ಸ್ವರೂಪವಾಗಿದ್ದು, ಶಕ್ತಿ, ಧೈರ್ಯ, ಧರ್ಮ ಹಾಗೂ ವಿಜಯದ ಸಂಕೇತವಾಗಿದ್ದಾಳೆ. ಈ ಹಿನ್ನೆಲೆಯಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಲೋಕಕಲ್ಯಾಣ, ಸುಖ–ಶಾಂತಿ ಹಾಗೂ ಸಮೃದ್ಧಿಗಾಗಿ ಪ್ರಾರ್ಥಿಸಲಾಯಿತು.

ನಾಡಹಬ್ಬ ತುಮಕೂರು ದಸರಾ ಉತ್ಸವದ ಅಂಗವಾಗಿ ಧಾರ್ಮಿಕ ಆಚರಣೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜಿಲ್ಲೆಯ ಶ್ರೀಮಂತ ಪರಂಪರೆ ಹಾಗೂ ಸಂಪ್ರದಾಯಗಳನ್ನು ಉಳಿಸಿ ಬೆಳೆಸಲು ಆದ್ಯತೆ ನೀಡಲಾಗಿದೆ. ದಸರಾ ಉತ್ಸವವು ಜನರಲ್ಲಿ ಭಕ್ತಿ, ಸೌಹಾರ್ದತೆ ಮತ್ತು ಧಾರ್ಮಿಕ ಜಾಗೃತಿಯನ್ನು ಮೂಡಿಸುವುದರ ಜೊತೆಗೆ ನಾಡಿನ ಸಾಂಸ್ಕೃತಿಕ ವೈಭವವನ್ನು ಪ್ರತಿಬಿಂಬಿಸುತ್ತಿದೆ.

ತುಮಕೂರು ದಸರಾ–2026ರ ಧಾರ್ಮಿಕ ಕಾರ್ಯಕ್ರಮಗಳ ಭಾಗವಾಗಿ ನಡೆದ ಕಾತ್ಯಾಯನಿ ದೇವಿಯ ವಿಶೇಷ ಪೂಜೆಯು ನವರಾತ್ರಿಯ ಆಧ್ಯಾತ್ಮಿಕ ಮಹತ್ವವನ್ನು ಸಾರಿತು.

ವಿದ್ಯಾವಂತರು ಎನ್‌ಡಿಎ ಬೆಂಬಲಿಸಲಿದ್ದಾರೆ: ಸಚಿವ ವಿ ಸೋಮಣ್ಣ ವಿಶ್ವಾಸ

ಕೊರಟಗೆರೆ: ರಾಜ್ಯದಲ್ಲಿ ಪದವೀಧರರು ಹಾಗೂ ವಿದ್ಯಾವಂತರು ಅಭಿವೃದ್ಧಿ ಮತ್ತು ವಿಕಸಿತ ಭಾರತದ ಪರವಾಗಿ ನಿಲ್ಲಲಿದ್ದು, ಅಪಪ್ರಚಾರ ಹಾಗೂ ಕುತಂತ್ರಗಳಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.



ಪಟ್ಟಣದ ಸಾದರ ಸಮುದಾಯ ಭವನದಲ್ಲಿ ಶುಕ್ರವಾರ ಆಗ್ನೇಯ ಪದವೀಧರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಎಂ. ಸುರೇಶ್ ಪರವಾಗಿ ಮತಯಾಚಿಸಿ ಅವರು ಮಾತನಾಡಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿದ ಸಂವಿಧಾನದ ಆಶಯದಂತೆ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಒಬ್ಬ ವ್ಯಕ್ತಿಗೆ ಒಂದೇ ಮತದಾನದ ಹಕ್ಕು ಇರಬೇಕು. ಮತದಾರರ ಪಟ್ಟಿಯ ಪರಿಷ್ಕರಣೆಗೆ ಸಂಬಂಧಿಸಿದ ಎಸ್‌ಐಆರ್ ಪ್ರಕ್ರಿಯೆ ಕುರಿತು ಹಲವು ರಾಜಕೀಯ ಪಕ್ಷಗಳು ಅಪಪ್ರಚಾರ ಮಾಡುತ್ತಿವೆ. ಇಂತಹ ಆರೋಪಗಳಿಗೆ ದೇಶದ ಜನರು ಹಾಗೂ ವಿದ್ಯಾವಂತರು ತಕ್ಕ ಉತ್ತರ ನೀಡಲಿದ್ದಾರೆ ಎಂದು ಹೇಳಿದರು.

ಆಗ್ನೇಯ ಪದವೀಧರ ಕ್ಷೇತ್ರವು ಐದು ಜಿಲ್ಲೆಗಳು ಹಾಗೂ 32 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯನ್ನು ಹೊಂದಿದೆ. ಪದವೀಧರರು ದೇಶದ ಅಭಿವೃದ್ಧಿಗೆ ಆಧಾರಸ್ತಂಭಗಳಾಗಿದ್ದರೆ, ಶಿಕ್ಷಕರು ಜ್ಞಾನ ಸಂಪನ್ಮೂಲಗಳಾಗಿದ್ದಾರೆ. ದೇಶದ ಅಭಿವೃದ್ಧಿ ಮತ್ತು ಭದ್ರತೆಯ ದೃಷ್ಟಿಯಿಂದ ಪದವೀಧರರು ತಮ್ಮ ಜವಾಬ್ದಾರಿಯನ್ನು ಅರಿತು ಮತ ಚಲಾಯಿಸಬೇಕು.

ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಕೆ.ಎಂ. ಸುರೇಶ್ ಅವರಿಗೆ ಮತಪತ್ರದಲ್ಲಿ '1' ಎಂದು ನಮೂದಿಸಿ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಬಯಲುಸೀಮೆ ಅಭಿವೃದ್ಧಿಗೆ ಆದ್ಯತೆ: ತುಮಕೂರು ? ರಾಯದುರ್ಗ ರೈಲ್ವೆ ಯೋಜನೆಯು 2027ರ ಡಿಸೆಂಬರ್‌ನಲ್ಲಿ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ. ಸಿರಾ?ಚಿಕ್ಕಬಳ್ಳಾಪುರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು, ದಾಬಸ್‌ಪೇಟೆ?ಕಲ್ಯಾಣದುರ್ಗ ರಾಷ್ಟ್ರೀಯ ಹೆದ್ದಾರಿ ಯೋಜನೆಯೂ ಆರಂಭವಾಗಲಿದೆ ಎಂದು ತಿಳಿಸಿದರು.

ಕೊರಟಗೆರೆ, ಮಧುಗಿರಿ, ಸಿರಾ ಮತ್ತು ಪಾವಗಡ ತಾಲ್ಲೂಕುಗಳು ಬಯಲು ಸೀಮೆಯ ಪ್ರದೇಶಗಳಾಗಿದ್ದು, ಈ ಭಾಗದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಮಧುಗಿರಿ ಹಾಗೂ ತಿಪಟೂರು ತಾಲ್ಲೂಕುಗಳನ್ನು ಜಿಲ್ಲಾ ಕೇಂದ್ರಗಳನ್ನಾಗಿ ಮಾಡಿದರೆ ಅಭಿವೃದ್ಧಿಗೆ ಮತ್ತಷ್ಟು ವೇಗ ದೊರೆಯಲಿದೆ ಎಂದು ಅಭಿಪ್ರಾಯಪಟ್ಟರು.

ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಯುವಕರ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಈ ವರ್ಷ ದೇಶದಲ್ಲಿ 10 ಸಾವಿರ ವೈದ್ಯಕೀಯ ಸೀಟುಗಳನ್ನು ಹೆಚ್ಚಿಸಿರುವುದು ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿದೆ. ಮುಂದಿನ ಪೀಳಿಗೆಯ ಭವಿಷ್ಯಕ್ಕೆ ಭದ್ರ ಬುನಾದಿ ಹಾಕುತ್ತಿರುವ ಎನ್‌ಡಿಎ ಸರ್ಕಾರದ ಅಭ್ಯರ್ಥಿಯನ್ನು ಯುವಕರು ಹಾಗೂ ಪದವೀಧರರು ಬೆಂಬಲಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು.

ಕಾರ್ಯಕ್ರಮದಲ್ಲಿ ತುಮಕೂರು ಬಿಜೆಪಿ ಅಧ್ಯಕ್ಷ ಹೆಬ್ಬಾಕ ರವಿ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಕಾಮರಾಜು, ಬಿಜೆಪಿ ತಾಲ್ಲೂಕು ಅಧ್ಯಕ್ಷ ರುದ್ರೇಶ್, ಮಾಜಿ ಅಧ್ಯಕ್ಷ ಪವನ್ ಕುಮಾರ್, ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ವೈ.ಎಸ್. ಹುಚ್ಚಯ್ಯ, ಮಾಜಿ ಸದಸ್ಯ ಪಿ.ಎನ್. ಕೃಷ್ಣಮೂರ್ತಿ, ತುಮುಲ್ ನಿರ್ದೇಶಕ ಸಿದ್ದಲಿಂಗಯ್ಯ, ಮುಖಂಡರಾದ ಅನಿಲ್ ಕುಮಾರ್, ವಿ.ಕೆ. ವೀರ ಕ್ಯಾತರಾಯ, ನರಸಿಂಹರಾಜು, ಲಕ್ಷ್ಮಣ್, ಲಕ್ಷ್ಮೀಶ್, ಮಂಜುನಾಥ್, ವೆಂಕಟೇಶ್, ಗುರುಪ್ರಸಾದ್, ಸಂತೋಷ್, ರಮೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸ್ಟಿಂಗ್ ಪ್ರಕರಣದ ಕುರಿತು ತನಿಖೆಯಾಗಲಿ: ಮಾಜಿ ಸಚಿವ ಕೆ.ಎನ್. ರಾಜಣ್ಣ

ತುಮಕೂರು: ಸ್ಟಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರು ಕಂಡುಬಂದಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ಒತ್ತಾಯಿಸಿದರು.

ತುಮಕೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ಟಿಂಗ್ ಆಪರೇಷನ್ ನಡೆಸಿದವರು ಯಾರು ಎಂಬ ಬಗ್ಗೆ ತಮಗೆ ಮಾಹಿತಿ ಇಲ್ಲ. ಈ ವಿಚಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ಬಂದಿರುವುದರಿಂದ, ಸೂಕ್ತ ತನಿಖೆ ನಡೆಸುವ ಮೂಲಕ ಪ್ರಕರಣದ ಸತ್ಯಾಂಶವನ್ನು ಹೊರತರಬೇಕು ಎಂದು ಹೇಳಿದರು.



ಆಡಿಯೋ ಅಥವಾ ವಿಡಿಯೋ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಪಡೆಯಲಾಗಿದೆ ಎಂಬ ವಿಷಯ ತಮಗೆ ತಿಳಿದಿಲ್ಲ ಎಂದು ಸ್ಪಷ್ಟಪಡಿಸಿದ ರಾಜಣ್ಣ, ರಾಹುಲ್ ಗಾಂಧಿ ರಾಜೀನಾಮೆ ಕೇಳಿದರೆ ತಕ್ಷಣವೇ ರಾಜೀನಾಮೆ ನೀಡುವುದಾಗಿ ಸಿದ್ದರಾಮಯ್ಯ ಈ ಹಿಂದೆ ಪದೇಪದೇ ಹೇಳುತ್ತಿದ್ದರು. ರಾಹುಲ್ ಗಾಂಧಿ ರಾಜೀನಾಮೆ ಕೇಳಿದ್ದರಿಂದ ಸಿದ್ದರಾಮಯ್ಯ ರಾಜೀನಾಮೆ ನೀಡಿದ್ದಾರೆ ಎಂದು ತಿಳಿಸಿದರು.

ತಮ್ಮ ವಿರುದ್ಧವೂ ಸ್ಟಿಂಗ್ ಆಪರೇಷನ್ ನಡೆಸುವ ಪ್ರಯತ್ನ ನಡೆದಿತ್ತು ಎಂದು ಹೇಳಿದ ಅವರು, ರಮೇಶ್ ಜಾರಕಿಹೊಳಿ ಅವರಿಗೆ ಸಂಬಂಧಿಸಿದ ಪ್ರಕರಣ ಹಾಗೂ ತಮ್ಮ ವಿರುದ್ಧ ನಡೆದಿತ್ತು ಎನ್ನಲಾದ ಪ್ರಯತ್ನದ ಬಗ್ಗೆಯೂ ತನಿಖೆ ನಡೆಯಬೇಕು ಎಂದು ಆಗ್ರಹಿಸಿದರು.

ಸ್ಟಿಂಗ್ ಪ್ರಕರಣದ ಹಿಂದೆ ಯಾರಿದ್ದಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ರಾಜಣ್ಣ, ?ಮಹಾನಾಯಕ? ಎಂಬ ಸಿನಿಮಾ ಬಂದಿರುವುದು ತಮಗೆ ಗೊತ್ತು. ಆದರೆ, ಅದರ ಹೊರತಾಗಿ ಈ ಪ್ರಕರಣದ ಹಿಂದೆ ಯಾರಿದ್ದಾರೆ ಎಂಬ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ಹೇಳಿದರು. ಪ್ರಕರಣದ ಕುರಿತು ಊಹಾಪೋಹಗಳಿಗೆ ಆಸ್ಪದ ನೀಡದೆ, ತನಿಖೆಯ ಮೂಲಕ ವಾಸ್ತವಾಂಶಗಳನ್ನು ಪತ್ತೆಹಚ್ಚಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಕ್ತ ತನಿಖೆಗೆ ಕ್ರಮ ಕೈಗೊಳ್ಳಬೇಕು ಎಂಬುದು ತಮ್ಮ ಒತ್ತಾಯ ಎಂದು ತಿಳಿಸಿದರು.

ತುಮಕೂರು ದಸರಾ ನಡೆಸಲು ಜಿಲ್ಲೆಯ ದೇವಾಲಯಗಳ ಹುಂಡಿಗೆ ಕೈ ಹಾಕಿದ ಜಿಲ್ಲಾಡಳಿತ ಜೆಡಿಎಸ್ ಮುಖಂಡ ಜಗದೀಶ್ ಕಿಡಿ!

ಕುಣಿಗಲ್: ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಬಿ.ಎನ್ ಜಗದೀಶ್ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತುಮಕೂರು ಜಿಲ್ಲೆ ಬರಪೀಡಿತ ಪ್ರದೇಶ ಎಂದು ಘೋಷಣೆಯಾಗಿದೆ. ಜನ ಸಾಮಾನ್ಯರಿಗೆ ಕುಡಿಯಲೂ ನೀರಿಲ್ಲ ಜಾನುವಾರುಗಳಿಗೆ ಮೇವಿನ ಕೊರತೆ ಎದುರಾಗಿದೆ. ಜಿಲ್ಲೆಯಲ್ಲಿ ತೀವ್ರ ತರವಾದ ಬರ ಬಂದಿರುವಾಗ ಜಿಲ್ಲಾಡಳಿತ ಜಿಲ್ಲೆಯ ಎ ಮತ್ತು ಬಿ ದರ್ಜೆಯ ದೇವಾಲಯಗಳಿಗೆ ಭಕ್ತರು ದೇಣಿಗೆ ನೀಡಿರುವ ಹುಂಡಿ ಹಣವನ್ನು ಕಳ್ಳತನ ಮಾಡಿ

ವೈಭವದ ದಸರಾ ಆಚರಣೆಗೆ ಜಿಲ್ಲಾಡಳಿತ ಮುಂದಾಗಿದೆ.

ರಾಜ್ಯ ಸರ್ಕಾರ ಆರ್ಥಿಕವಾಗಿ ದೀವಾಳಿ ಹಾಗಿದೆ, ಆಗಾಗಿ ಮುಜರಾಯಿ ಇಲಾಖೆ ದೇವಾಲಯಗಳ ಅಭಿವೃದ್ದಿಗೆ ಬಳಕೆ ಮಾಡಬೇಕಿದ್ದ ಹುಂಡಿ

ಹಣನ್ನು ಕಳ್ಳತನ ಮಾಡಿ ದಸರಾ ಆಚರಣೆಗೆ ಮುಂದಾಗಿರುವುದು ವಿಪರ್ಯಾಸವಾಗಿದೆ.

ಜಿಲ್ಲಾಧಿಕಾರಿಗಳು ಕೂಡಲೇ ದೇವಾಲಯಗಳಿಂದ ಪಡೆದಿರುವ ಹಣವನ್ನು ವಾಪಸ್ ನೀಡಬೇಕು ಇಲ್ಲದಿದ್ದರೆ ದೇವಾಲಯಗಳಲ್ಲಿ ಹುಂಡಿ ಹಣ ಕಳ್ಳರಿದ್ದಾರೆ ಎಂದು ನಾಮಫಲಕ ಅಳವಡಿಸುವ ಮೂಲಕ ಹೋರಾಟ ಮಾಡಬೇಕಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಜೆಡಿಎಸ್ ಮುಖಂಡರಾದ ಶ್ರೀನಿವಾಸ್, ರಂಗಸ್ವಾಮಿ, ದೀಪು, ವಕ್ತಾರ ತರಿಕೆರೆ ಪ್ರಕಾಶ್, ಮನೋಜ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಮಹಿಳಾ ಬೈಕ್ ರೈಡ್ :

ಕನ್ನಿಕಾ ಪರಮೇಶ್ವರಿ ಅವರಿಂದ ಚಾಲನೆ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ತುಮಕೂರು ದಸರಾ ಉತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಮಹಿಳಾ ಬೈಕ್ ರೈಡ್‌ಗೆ ಉಪಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಅವರ ಪತ್ನಿ ಕನ್ನಿಕಾ ಪರಮೇಶ್ವರಿ ಅವರು ಶನಿವಾರ ನಗರದ ಬಿ.ಜಿ.ಎಸ್. ವೃತ್ತದ ಬಳಿ ಚಾಲನೆ ನೀಡಿದರು.

ಬೈಕ್ ರೈಡಿನ ಮುಂದಿನ ಸಾಲಿನಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಕಣ್ಣಿಗೆ ಗಾಗಲ್, ತಲೆಗೆ ಹೆಲ್ಮೆಟ್ ಧರಿಸಿ ರಾಯಲ್ ಎನ್‌ಫೀಲ್ಡ್ ಭಾರಿ ಬೈಕನ್ನು ಚಲಾಯಿಸಿದ್ದು ನೋಡುಗರಿಗೆ ಅಚ್ಚರಿ ಮೂಡಿಸಿತು. ರಾಯಲ್ ಎನ್‌ಫೀಲ್ಡ್‌ನಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜ ಹಾಗೂ ಜಾವ ವಾಹನದಲ್ಲಿ ಭೂ ದಾಖಲೆಗಳ ಇಲಾಖೆಯ ಉಪನಿರ್ದೇಶಕಿ ಭಾವನ ಬಸವರಾಜ್ ಅವರೂ ಸಹ ಚಾಲನೆ ಮಾಡುವ ಮೂಲಕ ಜಿಲ್ಲಾಧಿಕಾರಿಗಳಿಗೆ ಸಾತ್ ನೀಡಿದರು. ಸುಮಾರು 300 ದ್ವಿಚಕ್ರ ವಾಹನಗಳ ಮಹಿಳಾ ಸವಾರರು ಈ ರೈಡ್‌ನಲ್ಲಿ ಭಾಗವಹಿಸಿದ್ದರು. ಹೊಂಡಾ ಆಕ್ಟಿವಾ, ಜುಪಿಟರ್, ಡಿಯೋ, ಆ್ಯಕ್ಸೆಸ್, ಫ್ಯಾಸಿನೋ ಬೈಕ್ ಸವಾರಿ ಮಾಡುತ್ತಾ ಬಿ.ಜಿ.ಎಸ್. ವೃತ್ತದಿಂದ ಅಶೋಕ ರಸ್ತೆ–ಡಿ.ಸಿ.ಕಚೇರಿ–ಕೋತಿತೋಪು ರಸ್ತೆ– ಶಿವಕುಮಾರ ಸ್ವಾಮೀಜಿ ಸರ್ಕಲ್–ಭದ್ರಮ್ಮ ವೃತ್ತದ ಮೂಲಕ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನಕ್ಕೆ ಸಾಗಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ ಸೇರಿದಂತೆ ಮತ್ತಿತರ ಅಧಿಕಾರಿ, ಸಾರ್ವಜನಿಕರು ಭಾಗವಹಿಸಿದ್ದರು.

ಮಹಿಷಾಸುರ: ಸತ್ಯ ಮತ್ತು ಮಿಥ್ಯ

ಸೂರ್ಯಪ್ರಗತಿನ್ಯೂಸ್.ಕಾಂ

* ಲಕ್ಷ್ಮೀಪತಿ ಕೋಲಾರ

ದ್ರಾವಿಡ ಭಾಷಿಕರನ್ನೂ ಸೇರಿಸಿಕೊಂಡಂತೆ, ಒಟ್ಟಾರೆ ಭಾರತೀಯರ ವಿಲಕ್ಷಣ ತಿಳಿವಳಿಕೆಯ ಬಹುದೊಡ್ಡ ಸಮಸ್ಯೆ ಏನೆಂದರೆ ಪುರಾಣ–ಮಹಾಕಾವ್ಯಗಳನ್ನೇ ಇತಿಹಾಸ ಅಂತ ನಂಬುವುದು! ಈ ನೆಲದ ಇಂದಿನ ಕೋಮುವಾದೀ ದುರಂತಗಳು ಮತ್ತವು ಉಂಟುಮಾಡಿರುವ ತಲ್ಲಣ, ದುಗುಡಗಳಿಗೆ ಈ ಬಗೆಯ ಮೌಢ್ಯದ ಮನಸ್ಥಿತಿಯೇ ಬಹುಮುಖ್ಯ ಕಾರಣವಾಗಿದೆ. ಕೆಲವು ಪುರಾಣ ಮಹಾಕಾವ್ಯಗಳಿಗೆ ಚರಿತ್ರೆಯ ಕೆಲವಂಶಗಳು ಪ್ರಭಾವ ಬೀರಿ ಪ್ರೇರಣೆ ನೀಡಿರಬಹುದಾದರೂ ಪುರಾಣಗಳು ಖಂಡಿತ ನೇರ ಇತಿಹಾಸವಲ್ಲವೇ ಅಲ್ಲ,

ಇತ್ತೀಚಿನ ಕೆಲ ವರ್ಷಗಳಿಂದ ಮೈಸೂರಿನ ಪ್ರಗತಿಪರ ಮಿತ್ರರ 'ಮಹಿಷ ದಸರ' ಸುದ್ದಿ ಮಾಡುತ್ತಿದೆ. ಮಹಿಷಾಸುರ, ಮಹಿಷಮಂಡಲ ಮತ್ತು ಮಹಿಷಾಸುರ ಮರ್ದಿನಿ ಪುರಾಣಕ್ಕೆ ಸಂಬಂಧಿಸಿದಂತೆ ಕೆಲವು ಚಾರಿತ್ರಿಕವೆಂದು ಹೇಳಲಾಗುವ ಅಂಶಗಳನ್ನು ಮುನ್ನೆಲೆಗೆ ತಂದು ಆಚಾರಿತ್ರಿಕವಾದ ನಿರೂಪಣೆಯೊಂದನ್ನು ಮಂಡಿಸಲಾಗುತ್ತಿದೆ. ಅವರ ಉದ್ದೇಶ ಒಳ್ಳೆಯದಾದರೂ, ಅಸಮಂಜಸವಾದ ಆಚರಣೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆಂಬುದೇ ನನ್ನ

ಖಂಡಿತವಾದ ಅಭಿಮತ. ಈ ನೆಲದಲ್ಲಿ ಸಂಭವಿಸಿದ, ಸಂಭವಿಸುತ್ತಿರುವ ಸಂಸ್ಕೃತಿ ಮತ್ತು ಧಾರ್ಮಿಕ ನೆಲೆಗಳಲ್ಲಿನ ವಿರೂಪಗೊಳಿಸಲ್ಪಟ್ಟ ಪಲ್ಲಟಗಳು, ವೈದಿಕಶಾಹಿಯ ಸಾಂಸ್ಕೃತಿಕ ವಸಾಹತುಶಾಹಿ

ದೆಸೆಯಿಂದ ತಿರುಚಲ್ಪಟ್ಟ ಐತಿಹಾಸಿಕ ಸಂಗತಿಗಳಿಗೆ ಸಂಬಂಧಿಸಿದಂತೆ ಜವಾಬ್ದಾರಿಯುತವಾದ ಸಂಸ್ಕೃತಿ ಚಿಂತಕರು ಖಂಡಿತ ಚಾರಿತ್ರಿಕ ಸಾಕ್ಷ್ಯಾಧಾರಗಳ ಮೂಲಕ ವಾಸ್ತವತೆಗೆ ಹತ್ತಿರದ ಹೊಸ ಹಾಗೂ ಮೂಲ ನಿರೂಪಣೆಗಳನ್ನು ಮಂಡಿಸಲೇಬೇಕಾದ ಒತ್ತಡ ಮತ್ತು ಅನಿವಾರ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಜಟಿಲ ಸವಾಲುಗಳನ್ನು ಒಡ್ಡಿವೆಯೆಂಬುದು ನಿಜ. ಆದರೆ ನಮ್ಮಂತಹವರು ಕೂಡ ವಿರೂಪಗಳಿಗೆ ಪ್ರತಿಯಾಗಿ ಮತ್ತೊಂದು ವಿರೂಪಗೊಂಡ ನಿರೂಪಣೆಯ ಸಮರ್ಥಕರಾಗಿ ನಿಂತುಬಿಟ್ಟರೆ ನಮ್ಮ ಸಂಸ್ಕೃತಿ ಹೋರಾಟಗಳ ಬಗೆಗಿನ ಆತ್ಮವಿಶ್ವಾಸವು ದುರ್ಬಲಗೊಂಡು, ನಾವು ಜನಶಕ್ತಿಯ ಬೆಂಬಲವನ್ನೂ ಕಳೆದುಕೊಳ್ಳುತ್ತೇವೆ. ಅದರೊಂದಿಗೆ ಮುಂದಿನ ದಿನಗಳ ನಮ್ಮ ಸಂಸ್ಕೃತಿ ಇತಿಹಾಸದ ಕುರಿತ ಸತ್ಯನಿಷ್ಠ ನಿರೂಪಣೆಗಳನ್ನೂ ಸಮಾಜ ಅನುಮಾನಿಸುವುದರೊಂದಿಗೆ ಕ್ರಿಯಾತ್ಮಕವಾಗಿ ಸ್ಪಂದಿಸದೇ ಹೋಗಬಹುದಾದ ಅಪಾಯಗಳು ಕೂಡ ಇಲ್ಲದೇ ಇಲ್ಲ. ನಾವು ಎಂದೆಂದಿಗೂ ಸತ್ಯ ಪಕ್ಷಪಾತಿಗಳಾಗಿ, ಎಂತಹುದೇ ಮುಲಾಜುಗಳಿಗೂ ಒಳಗಾಗದೇ ಸತ್ಯಾಗ್ರಹಿಗಳಾಗಿ ನಿಲ್ಲುತ್ತೇವೆಂಬುದೇ ನಮ್ಮ ನಿಜವಾದ ನೈತಿಕ ಶಕ್ತಿ ಎಂಬ ಮಹತ್ವದ ಅಂಶವನ್ನು ನಾವು ಮರೆಯಲೇಬಾರದಲ್ಲವೇ?

ಪುರಾಣ ಸೃಷ್ಟಿಯ ಪಾತ್ರವಾದ ಮಹಿಷಾಸುರ ದ್ರಾವಿಡ ಮೂಲದ ನಮ್ಮವನು ಅಂತ ನಂಬಿರುವುದರ ಹಿಂದಿನ ಭಾವುಕ ಹಾಗೂ ದುರ್ಬಲ ಕಾರಣಗಳು ಬಹುಶಃ ಇವಾಗಿರಬಹುದು :

1. ವೈದಿಕರಿಗಿಂತಲೂ ಪ್ರಾಚೀನರಾದ ದ್ರಾವಿಡರು ಮತ್ತು ದ್ರಾವಿಡಪೂರ್ವ ಮೂಲನಿವಾಸಿ ಬುಡಕಟ್ಟುಗಳು ಹಾಗೂ ಒಟ್ಟಾರೆ ಶೈವ ಮೂಲದವರನ್ನು ಕಕೇಷಿಯನ್ ಆರ್ಯ ವೈದಿಕರು ತಮ್ಮ ಪುರಾಣ ಮತ್ತು ಮಹಾಕಾವ್ಯಗಳಲ್ಲಿ ಅಸುರರು, ದಾನವರು ಮತ್ತು ರಾಕ್ಷಸರು ಎಂಬಂತೆ ಕೆಡುಕಿನ ದುಷ್ಟ ಪಾತ್ರಗಳನ್ನಾಗಿ ಚಿತ್ರಿಸುವುದರ ಮೂಲಕ ಜನಾಂಗೀಯ ಅಸಹನೆಯ ನೆಲೆಯಲ್ಲಿ ಅಪಮಾನಿಸಿದ್ದಾರೆ ಎಂಬ ಸರಳ ಸಮೀಕರಣದ ತಪ್ಪು ಗ್ರಹಿಕೆಗಳು, ದಾಸ, ದಸ್ಯು, ಶಂಬರ, ನಿಷಾದ, ಆಯಜ್ಞೀಯ ಮತ್ತು ಅನಿಂದ್ರರು ಅಂತ ದೂಷಿಸಿದ್ದಾರೆ ಎಂಬ ಆಧಾರವಿಲ್ಲದ, ಆಚಾರಿತ್ರಿಕ ಗ್ರಹಿಕೆಗಳು, ದಾಸ ಮತ್ತು ದಸ್ಯುಗಳು ಕೂಡ ಭಿನ್ನ ಆರ್ಯ ಪಂಗಡಗಳೆ, ಸು_ದಾಸ, ದಿವೋದಾಸ ಮತ್ತು ತ್ರಸದಸ್ಯು ಇತ್ಯಾದಿಗಳನ್ನು ಗಮನಿಸಬಹುದು.

2. ಮಹಿಷ ಎಂದರೆ ಎಮ್ಮೆ ಅಥವಾ ಕೋಣ ಅಂತಿರುವುದರಿಂದಲೂ ಮತ್ತು ಎಮ್ಮೆ/ಕೋಣಗಳು ತಳ ಸಂಸ್ಕೃತಿಯ ಪ್ರತೀಕವೆಂಬ ಗ್ರಹಿಕೆಯ ಹಿನ್ನೆಲೆಯಲ್ಲಿಯೂ ಮಹಿಷಾಸುರ ಖಂಡಿತ ದ್ರಾವಿಡ ಮೂಲದವನೇ ಆಗಿರಬೇಕೆಂಬ ಮೇಲ್ನೋಟದ ದುರ್ಬಲ ತರ್ಕ–ತೀರ್ಮಾನಗಳಿಗೆ ಬಂದು ತಲುಪಿರುವುದು. ಯಮನ ವಾಹನವೂ ಕೋಣವೇ, ಕೇರಳದಲ್ಲಿ ವಿಷ್ಣುಮಾಯ ಎಂಬುದಾಗಿ ವೈದಿಕೀಕರಣಗೊಂಡಿರುವ ಕುಟ್ಟಿ ಚಾತ್ತನ್ನನ ವಾಹನವೂ ಕೋಣವೇ, ನೀಲಗಿರಿ ತೋಡರ ಕುಲಮೂಲ ಸಂಸ್ಕೃತಿಯ ಪ್ರಧಾನ ಭಾಗವೇ ಕೋಣ, ಮಹಿಷ ಹೆಸರಿನ ಬುಡಕಟ್ಟುಗಳೂ ಉತ್ತರ ಭಾರತದಲ್ಲಿವೆ. ಅನೇಕ ಸಮುದಾಯಗಳ ಕುಲ ಬೆಡಗುಗಳಾಗಿಯೂ ಕೋಣ/ಎಮ್ಮೆ ಇರುವುದನ್ನೂ ನಾವು ಬಲ್ಲೆವು, ಆದರೆ ಇವರಾರೂ

ಬೃಹತ್ ಕಥಾ ಕೋಶದಲ್ಲಿ .....ದಕ್ಷಿಣಾಪಥ ದೇಶಸ್ಥ ಪುನ್ನಾಟ ವಿಷಯ...' ಎಂಬ ಉಲ್ಲೇಖ ಜೈನ ಧರ್ಮೀಯರಿಗೆ ಸಂಬಂಧಿಸಿದಂತೆಯೇ ಉಲ್ಲೇಖಿಸಲ್ಪಟ್ಟಿದೆ. ಜೈನ ವಲಸೆಗಾರರ ಅಂತಿಮ ಗುರಿಯೇ ಪುನ್ನಾಟ ದೇಶ ಎಂಬ ಮಾತೂ ಬೃಹತ್ ಕಥಾ ಕೋಶದಲ್ಲಿದೆ. ಶ. ಶೆಟ್ಟರ್ ಅವರು ತಮ್ಮ 'ಶಂಗಂ ತಮಿಳಗಂ' ಕೃತಿಯಲ್ಲಿ ಪುನ್ನಾಟರಿಗೂ, ದ್ರಾವಿಡ ಸಂಸ್ಕೃತಿಗೂ ನಡುವಿನ ನಿಕಟತೆಯನ್ನು ವಿವರಿಸಿದ್ದಾರೆ. ಸಂಗಂ ಸಾಹಿತ್ಯದಲ್ಲಿನ ಪುನ್ನಾಟರ ಕುರಿತ ಉಲ್ಲೇಖಗಳ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ಧೀರಜ್ ಎಂ.ಎಸ್. ಎಂಬುವವರು ಕೇರಳ ಜೈನ ಇತಿಹಾಸದಲ್ಲಿನ ಪುನ್ನಾಟ ದೇಶದ ಪಾತ್ರ ಕುರಿತಂತೆ ಸಂಶೋಧನಾ ಕೃತಿಯೊಂದನ್ನು ಬರೆದಿದ್ದು ಅವರೂ ಮುನ್ನಾಟರ ಕಾಲವನ್ನು ಕ್ರಿ.ಪೂ. 3ನೇ ಶತಮಾನವೆಂದೇ ನಿರೂಪಿಸಿದ್ದಾರೆ. ವಯನಾಡ್ ಮತ್ತು ಪಾಲಕ್ಕಾಡಿನ ಶಾಸನಗಳಲ್ಲಿ 'ಮುನ್ನಾಡ ಅಧಿಗಾರಂ' ಎಂಬ ಮಾತುಗಳಿವೆ.

ತಮ್ಮ ಕುಲವನ್ನು ಹೀನೈಸಲಿಕ್ಕಾಗಿಯೇ ಮಹಿಷಾಸುರ ಮರ್ದಿನಿ ಪುರಾಣವನ್ನು ಸೃಷ್ಟಿಸಲಾಗಿದೆಯೆಂದು ಭಾವಿಸಿಲ್ಲ. ಆಸ್ಟ್ರೋ–ಏಷಿಯಾಟಿಕ್‌ನ ಸಮುದಾಯಗಳಲ್ಲಿ 'ಆಸುರ' ಎಂಬ ಬುಡಕಟ್ಟೊಂದು ಜಾರ್ಖಂಡ್‌ನಲ್ಲಿದ್ದು, ಅವರು ಕೂಡ ಮಹಿಷಾಸುರ ತಮ್ಮ ಕುಲಮೂಲದ ಆದಿಪುರುಷನೆಂದೇ ಭ್ರಮಿಸಿ ಪ್ರತಿವರ್ಷವೂ ಮಹಿಷ ದಸರ ಆಚರಿಸುತ್ತಿದ್ದಾರೆ. ಏಕಕಾಲಕ್ಕೇ ಎರಡು ಪ್ರದೇಶಗಳಲ್ಲಿ ಮಹಿಷಾಸುರನಿರುವುದು ಸಾಧ್ಯವಿಲ್ಲದಿರುವಂತೆಯೇ, 'ಅಸುರ' 'ಮಹಿಷ' ಎಂಬ ಬುಡಕಟ್ಟುಗಳ ಹೆಸರುಗಳು ಕೂಡ ಸಂಸ್ಕೃತ ಮೂಲದ ಹೆಸರುಗಳಾಗಿದ್ದು, ಆ ಬುಡುಕಟ್ಟುಗಳ ಮೇಲೆ ಹೇರಲ್ಪಟ್ಟಿರಬೇಕು. ಇಲ್ಲವೇ ಸಂಸ್ಕೃತೀಕರಣದ ಅನುಕರಣಶೀಲತೆಯ ಫಲವಾಗಿರಬೇಕು. ಇನ್ನು ತಮಿಳಿನ ಸಂಗಂ ಸಾಹಿತ್ಯದಲ್ಲಿ ಪ್ರಾಚೀನ ಮೈಸೂರು ಪ್ರದೇಶವನ್ನು ಎರುಮೈನಾಡು ಎಂದು ಹೆಸರಿಸಿರುವುದರಿಂದ ಮಹಿಷಾಸುರ ಈ ಪ್ರದೇಶದವನೇ ಆಗಿರಬೇಕೆಂಬ ತರ್ಕವೂ ಕಟ್ಟುಕಥೆಗೆ ನೀರೆರೆದಿದೆ.

2. ಕೊನೆಯದಾಗಿ, ಅಶೋಕ ಸಾಮ್ರಾಟನು ಬೌದ್ಧ ಧರ್ಮದ ಪ್ರಸಾರಕ್ಕೆಂದು ಮಹದೇವ ತೇರಾ ಎಂಬ ಭಿಕ್ಕುವನ್ನು ಮಹಿಷಮುಂಡಲಕ್ಕೆ ಅರ್ಥಾತ್ ಮೈಸೂರು ಪ್ರಾಂತ್ಯಕ್ಕೆ ನಿಯೋಜಿಸಿದನಾಗಿ, ಆತ ಇಲ್ಲಿಗೆ ಬಂದು ಆರ್ಯಾವರ್ತದ ಆರ್ಯ ರಾಜರುಗಳ ಮೇಲೆ ಯುದ್ಧ ಮಾಡಿ ದ್ರಾವಿಡ ಸಾಮಾಜ್ಯವನ್ನು ಕಟ್ಟಿದ ಎಂಬಂಶ. ಈ ಹಿನ್ನೆಲೆಯಲ್ಲಿ ಈ ಮಹದೇವ ತೇರಾ ಅಥವಾ ಮಹಿಷಾಸುರನನ್ನು ಹೀನೈಸುವ ಸಲುವಾಗಿಯೇ ಮಹಿಷಾಸುರ ಮರ್ದಿನಿ ಪುರಾಣವನ್ನು ರೂಪಿಸಲಾಗಿದೆಯೆಂಬ ಮತ್ತೊಂದು ತಾಳ–ಮೇಳ ಕೂಡದ ಕಟ್ಟುಕಥೆ. ಈ ಮೂರು ಅಂಶಗಳು ಖಂಡಿತ ಚಾರಿತ್ರಿಕವಾದ ಗಟ್ಟಿ ಆಧಾರಗಳ ಮೇಲೆ ರೂಪುಗೊಂಡ ಗಂಭೀರ ಅಧ್ಯಯನಗಳಾಗಿಲ್ಲ ಎಂಬುದೇ ಮಹಿಷ ದಸರ ಪರಿಕಲ್ಪನೆಯ ಬಹುಮುಖ್ಯ ಲೋಪವಾಗಿದೆ. ಈ ಹಿನ್ನೆಲೆಯಲ್ಲಿಯೇ ಮಹಿಷ ದಸರ, ಮಹಿಷಮಂಡಲ ಹಾಗೂ ಮಹಿಷಾಸುರ ಮರ್ದಿನಿ ಪುರಾಣಗಳಿಗೆ ಸಂಬಂಧಿಸಿದಂತೆ ಚಾರಿತ್ರಿಕ ಸತ್ಯದ ಕೆಲವಂಶಗಳೊಂದಿಗೆ ಇಲ್ಲಿ ಚರ್ಚಿಸುವ ಪ್ರಯತ್ನ ನಡೆಸಲಾಗಿದೆ. ಮೈಸೂರು ಕ್ರಿಪೂ.ದಿಂದ ಹಿಡಿದು ಇತಿಹಾಸದಲ್ಲಿ ಎಂದೂ ಮಹಿಷಮುಡಲವಾಗಿರಲೇ ಇಲ್ಲ. ನಿಜಕ್ಕೂ ಮಹಿಷಮುಂಡಲವೆಂಬುದು ಯಾವುದು? ಅದು ಇರುವುದಾದರೂ ಎಲ್ಲಿ? ಪುರಾಣಗಳು ಹಾಗೂ ಐತಿಹಾಸಿಕ ದಾಖಲೆಗಳು ಈ ಬಗ್ಗೆ ವಿಪುಲ ಸಾಕ್ಷ್ಯಾಧಾರಗಳನ್ನು ಒದಗಿಸಬಲ್ಲವು.

(ಅ) ಹರಿವಂಶವು ಮಾಹಿಷ್ಮತಿಯ ಸ್ಥಾಪಕನಾದವನು ಹೈಹಯ ವಂಶದ ಮಾಹಿಷ್ಮಂತ್ ಎಂಬಾತ ಎಂದು ದಾಖಲಿಸಿದೆ. ಹೈಹಯ ರಾಜವಂಶದವರು ಇತಿಹಾಸದಲ್ಲೆಂದೂ ಮೈಸೂರು ಪ್ರದೇಶವನ್ನು ಆಳಿದರೆಂಬುದಕ್ಕೆ ಯಾವ ಚಾರಿತ್ರಿಕ ದಾಖಲೆಗಳೂ ಇಲ್ಲ. (ಆ) ಬೌದ್ಧ ಗ್ರಂಥ ದಿಗನಿಕಾಯವು ಮಾಹಿಷ್ಮತಿಯು ಅವಂತಿಯ ರಾಜಧಾನಿ ಎಂದು ಘೋಷಿಸುತ್ತದೆ. ಮಹಾ ಗೋವಿಂದ ಸುತ್ತಾಂತವು ಸಹ ಇದೇ ಮಾಹಿತಿ ನೀಡುತ್ತದೆ. (ಇ) ಕಾಳಿದಾಸನ ರಘುವಂಶವು ಮಾಹಿಷ್ಮತಿಯು ನರ್ಮದಾ ನದಿಯ ದಂಡೆಯಲ್ಲಿದ್ದು ಅನುಪ ದೇಶದ ರಾಜಧಾನಿಯಾಗಿದೆ ಎನ್ನುತ್ತದೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕದಲೂರು ಎಂಬಲ್ಲಿ ದೊರೆತಿರುವ ಕ್ರಿ.ಶ. 862ರ ತಾಮ್ರ ಶಾಸನವೇ ಮೈಸೂರು ಬಗೆಗಿನ ಪ್ರಪ್ರಥಮ ಉಲ್ಲೇಖವಾಗಿದ್ದು ಅದರಲ್ಲಿ 'ಮಯ್‌ಸೂರು' ಎಂಬ ಉಲ್ಲೇಖವೇ ಕಂಡುಬಂದಿದೆ. ಅನಂತರ ಹೊಯ್ಸಳರ ಕ್ರಿ.ಶ. 11 ಮತ್ತು 12ನೇ ಶತಮಾನದ ಶಾಸನಗಳಲ್ಲೂ 'ಮಯಿಸುನಾಡು', 'ಮಯಿಸೂರುನಾಡು' ಎಂಬ ಉಲ್ಲೇಖಗಳೇ ಇವೆ. 'ಮಯಿಸೂರು' ಎಂಬ ಈ ಪ್ರಾಚೀನ ಸ್ಥಳನಾಮದ ನಿಷ್ಪತ್ತಿ ಮೂಲವನ್ನು ಹುಡುಕಿದಲ್ಲಿ ಮಯ್ > ಮೈ (ಒಚು) ಎಂಬ ದ್ರಾವಿಡ ಮೂಲದ ಧಾತು ಬಹುಶಃ ನಮಗೆ ನೆರವಾಗಬಲ್ಲದು ಎನಿಸುತ್ತದೆ. 'ಮಯ್' ಎಂದರೆ ತಮಿಳಿನಲ್ಲಿ ಕಪ್ಪು, ನೀರು ಮತ್ತು ಪಟ್ಟಣಗಳೆಂಬ ಅರ್ಥಗಳು ದೊರೆಯುತ್ತವೆ. ಈ ಧಾತುವಿನಿಂದ ಸಾಧಿತವಾಗುವ ಪದಗಳಲ್ಲಿ 'ಮಯಿಚೂರು' ಅರ್ಥಾತ್ ಪಟ್ಟಣ ಎಂಬುದೂ ಒಂದು. ವಿವಿಧ ಇತಿಹಾಸಕಾರರ ವಿವರಣೆಗಳನ್ನೂ ಗಮನದಲ್ಲಿರಿಸಿಕೊಂಡು ಹೇಳುವುದಾದಲ್ಲಿ – ಮಯ್ > ಮಯಿಚೂರು > ಮಯಿಸೂರು > ಮೈಸೂರು ಎಂಬ ನಿಷ್ಪತ್ತಿ ವಿವರಣೆಯೇ ಸತ್ಯಕ್ಕೆ ಹೆಚ್ಚು ಸಮೀಪದ್ದಾಗಿ ನನಗೆ ತೋಚುತ್ತಿದೆ. ದ್ರಾವಿಡ ಭಾಷಾಮೂಲದ 'ಮಯಿಸೂರು' ಎಂಬುದೇ ಅತೀ ಪ್ರಾಚೀನ

ಸ್ಥಳನಾಮವಾಗಿರುವುದರಿಂದ, ಈ ಪದದಿಂದ ನಾವು ಹೇಗೂ 'ಮಹಿಷೂರು' ಎಂಬ ಸಂಸ್ಕೃತ ಭಾಷಾ ಮೂಲದ ಸ್ಥಳನಾಮವನ್ನು ಸಾಧಿಸುವುದು ಖಂಡಿತ ಅಸಂಭವನೀಯ. 'ಎರುಮೈಯೂರು' ಎಂಬ ಸಂಗಂ ಸಾಹಿತ್ಯದಲ್ಲಿನ ಉಲ್ಲೇಖವು ಕೂಡ 'ಮಹಿಷೂರು' ಎಂಬ ಸಂಸ್ಕೃತ ಭಾಷೆಯ ಸ್ಥಳನಾಮವೊಂದು ರೂಪುಗೊಳ್ಳಲು ನೆರವು ನೀಡಿರಬಹುದಾದ ಸಾಧ್ಯತೆ ಖಂಡಿತ ಇಲ್ಲವೆಂದೇ ಅನಿಸುತ್ತಿದೆ. ಯಾಕೆಂದರೆ ಎರುಮೈ ಎಂದರೆ ಎಮ್ಮೆ ಎಂಬರ್ಥವೇ ಪ್ರಧಾನವಾದುದು. ಎಮ್ಮೆ ಎಂಬ ಇಂದಿನ ಕನ್ನಡ ಪದ ಸಾಧಿತವಾದದ್ದೇ ಪ್ರಾಚೀನ ಕನ್ನಡದಲ್ಲೂ ಬಳಕೆಯಲ್ಲಿದ್ದ ಎರುಮೈ ಎಂಬ ಪದದಿಂದಲೇ, ಅಪಟಟಪಟಿ ರಜಟಿಜಜಡಿ ಆಗಿಯೂ ಸಾಂದರ್ಭಿಕವಾಗಿ ಬಳಕೆಗೊಂಡಿದ್ದರೂ, ಕೋಣ ಅಥವಾ ಮಹಿಷಕ್ಕೆ ತಮಿಳಿನಲ್ಲಿ 'ಆಣ್ ಎರುಮೆ' ಎಂಬ ನಿರ್ದಿಷ್ಟ ಪದದ ಪ್ರಯೋಗವೇ ಇದೆಯೆಂಬುದನ್ನೂ ನಾವು ಗವುನದಲ್ಲಿರಿಸಿಕೊಳ್ಳಲೇಬೇಕು. ಆಣ್' ಎಂದರೆ ತಮಿಳಿನಲ್ಲಿ ಗಂಡು ಎಂಬರ್ಥವಿದೆ.

ಉಳಿದಂತೆ ಹೊಯ್ಸಳ ವಿಷ್ಣುವರ್ಧನನ(ಕ್ರಿ.ಶ.1127) ಶಾಸನವೊಂದರಲ್ಲಿ ಇಂದಿನ ಚಾಮುಂಡಿ ಬೆಟ್ಟವನ್ನು 'ಮಹಾಬಲತೀರ್ಥ' ಎಂದೇ ಉಲ್ಲೇಖಿಸಲಾಗಿದೆ. ಮಹಾಬಲಾದ್ರಿ, ಮಹಾಬಲಾಚಲವೆಂದೂ ಕರೆಯಲಾಗುತ್ತಿತ್ತು. ಯಾಕೆಂದರೆ ಕ್ರಿ.ಶ. 950ರ ಸುಮಾರಿಗೆ ಬೆಟ್ಟದ ದೇವರಾಗಿದ್ದದ್ದು



ಮಹಾಬಲೇಶ್ವರನಾದ ಶಿವನೇ. ಅನಂತರ 12ನೇ ಶತಮಾನದಲ್ಲಿ ಹೊಯ್ಸಳರು (ಬಹುಶಃ ವಿಷ್ಣುವರ್ಧನ) ಸಣ್ಣ ಪ್ರಮಾಣದ ಚಾಮುಂಡಿ ಗುಡಿಯನ್ನು ಸ್ಥಾಪಿಸಿದರು. ವಿಜಯನಗರದರಸರು ವಿಮಾನ ಗೋಪುರ ಹಾಗೂ ಪ್ರಾಕಾರಗಳೊಂದಿಗೆ ದೇವಾಲಯವನ್ನು ವಿಸ್ತರಿಸಿದರು. ದೊಡ್ಡ ದೇವರಾಜ ವಡೆಯರ್ ಅವರು 1650ರಲ್ಲಿ, ಅಂದರೆ ಇಂದಿಗೆ ಕರಾರುವಾಕ್ಕಾಗಿ 372 ವರ್ಷಗಳ ಹಿಂದಷ್ಟೇ ಮಹಿಷಾಸುರನ ಪ್ರತಿಮೆಯನ್ನು ಸ್ಥಾಪಿಸಿದರು. ಅಂದರೆ, 12ನೇ ಶತಮಾನದವರೆಗೂ ಮಯಿಸೂರಿಗೂ ಚಾಮುಂಡಿಗೂ ಯಾವುದೇ ಸಂಬಂಧವೂ ಇರಲಿಲ್ಲ. ಹಾಗೆಯೇ ಕೇವಲ 370 ವರ್ಷಗಳ ಹಿಂದೆ ಮಹಿಷಾಸುರನಿಗೂ ಮಯಿಸೂರಿಗೂ ಕೂಡ ಸಂಬಂಧವಿರಲೇ ಇಲ್ಲ. ಕೇವಲ 16ನೇ ಶತಮಾನದಿಂದೀಚೆಗಷ್ಟೇ ಮೈಸೂರನ್ನು 'ಮಹಿಷೂರು' ಅಂತ ಕರೆಯುವ ಪದ್ಧತಿ ಆರಂಭವಾಯಿತೆಂದು ಬಿ.ಎಲ್. ರೈಸ್ ಅವರೂ ಅಭಿಪ್ರಾಯಪಟ್ಟಿದ್ದಾರೆ. ಇತಿಹಾಸದ ವಾಸ್ತವ ಹೀಗಿರುವಾಗ ಮೈಸೂರು ಎಂಬ ಊರಿನ ಅಸ್ತಿತ್ವವೇ ಇಲ್ಲದಿದ್ದ ಕ್ರಿಪೂ. 3ನೇ ಶತಮಾನದಲ್ಲೇ ಮಹಿಷಾಸುರ ಇಲ್ಲಿ ಪ್ರಬಲ ದ್ರಾವಿಡ ಸಾಮ್ರಾಜ್ಯ ಕಟ್ಟಿದನೆಂದೂ, ಆ ಕಾರಣದಿಂದಲೇ ಮಹಿಷೂರು >ಮೈಸೂರು ಎಂದಾಯಿತೆಂಬುದು ಎಷ್ಟರ ಮಟ್ಟಿಗೆ ಸರಿ? ಮಹಿಷಾಸುರನಿಗೆ ವೈದಿಕರು ದ್ರೋಹ ಬಗೆದದ್ದೇ ನಿಜವಾಗಿದ್ದಲ್ಲಿ ಮಹಿಷೂರಿಗೆ ಬದಲಾಗಿ ಈಗದು ಚಾಮುಂಡಿಪುರವಾಗಿರಬೇಕಿತ್ತಲ್ಲವೇ? ಮಹಿಷ ಮಂಡಲ ಎಲ್ಲಿದೆ?: ಮೈಸೂರು ಕ್ರಿಪೂ.ದಿಂದ ಹಿಡಿದು ಇತಿಹಾಸದಲ್ಲಿ ಎಂದೂ ಮಹಿಷಮುಂಡಲವಾಗಿರಲೇ ಇಲ್ಲ. ನಿಜಕ್ಕೂ ಮಹಿಷಮುಡಲವೆಬುದು ಯಾವುದು? ಅದು ಇರುವುದಾದರೂ ಎಲ್ಲಿ? ಪುರಾಣಗಳು ಹಾಗೂ ಐತಿಹಾಸಿಕ ದಾಖಲೆಗಳು ಈ ಬಗ್ಗೆ ವಿಪುಲ ಸಾಕ್ಷ್ಯಾಧಾರಗಳನ್ನು ಒದಗಿಸಬಲ್ಲವು.

ಕ್ರಿ.ಶ.1650ರಲ್ಲಿ ದೊಡ್ಡ ದೇವರಾಜ ಒಡೆಯರು ಪಾರ್ವತಿಯ ಎಲ್ಲಾ ಶಕ್ತಿರೂಪಗಳನ್ನೂ ಸಮಾನವೆಂಬಂತೆ ನೋಡುವ ಪರಿಪಾಠ ರೂಢಿಯಲ್ಲಿದ್ದುದ್ದರಿಂದ, ಬಹುಶಃ ಚಾಮುಂಡಿಯನ್ನೇ ಮಹಿಷಾಸುರ ಮರ್ದಿನಿ ಎಂದು ಭಾವಿಸಿ ಅದೇ ಬೆಟ್ಟದಲ್ಲಿ ಮಹಿಷಾಸುರನ ಪ್ರತಿಮೆಯನ್ನು ನಿಲ್ಲಿಸಿದರು. ಬಿ.ಎಲ್.ರೈಸರ ತಪ್ಪು ಗ್ರಹಿಕೆಯ ಪ್ರಮಾದಕ್ಕೆ ಹೊಯ್‌ಕೈಯ್ಯಾಗಿ ದೊಡ್ಡ ದೇವರಾಜ ಒಡೆಯರ ತಪ್ಪು ಗ್ರಹಿಕೆಯೂ ಸೇರಿ ಇತಿಹಾಸದ ಅಪಚಾರ ಸರಣಿ ಮುಂದುವರೆಯಿತೆನ್ನಬಹುದು. ಯಾಕೆಂದರೆ, ಪುರಾಣಗಳ ಪ್ರಕಾರ ಮಹಿಷಾಸುರನನ್ನು ಕೊಂದದ್ದು ದುರ್ಗಿಯೇ ಹೊರತು ಚಾಮುಂಡಿಯಲ್ಲ. ಇಂದಿಗೂ ನವರಾತ್ರಿಯಂದು ಪಶ್ಚಿಮ ಬಂಗಾಳದಲ್ಲಿ ನಡೆಯವುದು ದುರ್ಗಿ ಪೂಜೆಯೇ ಹೊರತು ಚಾಮುಂಡಿ ಪೂಜೆಯಲ್ಲ. ಚಂಡ–ಮುಂಡರನ್ನು ಚಾಮುಂಡಿ ವಧಿಸಿದಳೇ ಹೊರತು, ಮಹಿಷಾಸುರನನ್ನು ವಧಿಸಿದ ಪುರಾಣೋಲ್ಲೇಖವೆಲ್ಲೂ ದೊರೆಯುವುದಿಲ್ಲ. ಪಾರ್ವತಿಯ ಇನ್ನಿತರ ಶಕ್ತಿರೂಪಿಣಿ ಅವತಾರಗಳಾದ ಕಾಳಿ, ತಾರಾ, ತ್ರಿಪುರ ಸುಂದರಿ, ಭೈರವಿ ಅಥವಾ ಮಾತಂಗಿಯರನ್ನೋ ಮಹಿಷಾಸುರ ಮರ್ದಿನಿಯರೆನ್ನಲಾದೀತೇ? ಚಾಮುಂಡಿಯಾದರೂ ಅಷ್ಟೇ ತಾನೇ? ಆದರೂ ದೊಡ್ಡ ದೇವರಾಜ ಒಡೆಯರ ಶಕ್ತಿ ಸ್ವರೂಪಿಣಿ ದೇವಿಯರ ಕುರಿತ ಸಾಮಾನ್ಯ ಗ್ರಹಿಕೆಯೇ ಜನಮಾನಸದಲ್ಲೂ ಬಲವಾಗಿ ಬೇರೂರಿರುವುದರಿಂದ ಕಾಳಿ, ಚಂಡಿಕಾ, ಚಾಮುಂಡಿ, ದುರ್ಗಿಯರನ್ನೆಲ್ಲಾ ಸಮಾನ ಭಾವ – ಗ್ರಹಿಕೆಯಿಂದಲೇ ನೋಡುವ ಪರಿಪಾಟವೂ ಮುಂದುವರೆಯುತ್ತಲೇ ಬಂದಿದೆ.

ಮಹಿಷಾಸುರ ಮತ್ತು ಬೌದ್ಧ ಧರ್ಮ:

ಕ್ರಿ.ಪೂ.250ರ ಆಸುಪಾಸಲ್ಲಿ ಆಶೋಕ ಸಾಮ್ರಾಟರು ಮಹದೇವ ತೇರಾನನ್ನು (ಈತ ನಾಲ್ಕು ಕೊಲೆಗಳನ್ನು ಮಾಡಿ ಪಶ್ಚಾತ್ತಾಪಗೊಂಡು ಬೌದ್ಧನಾದವನು) ಮಹಿಷಮಂಡಲಕ್ಕೂ ಹಾಗೂ ರಬ್ಬಿತ ಎಂಬ ಭಿಕ್ಕುವನ್ನು ಬನವಾಸಿಗೂ ಬೌದ್ಧಧರ್ಮವನ್ನು ಪ್ರಸಾರ ಮಾಡಲೆಂಬ ಉದ್ದೇಶದೊಂದಿಗೆ ಕಳುಹಿಸಿದರು ಎಂಬ ಮಾಹಿತಿ ಶ್ರೀಲಂಕಾದ ಬೌದ್ಧ ಗ್ರಂಥವಾದ ಮಹಾವಂಶದಲ್ಲಿ ನಿರೂಪಿಸಲ್ಪಟ್ಟಿದೆ. (ಪು. 351). ಆದರೆ ಮಹದೇವ ತೇರಾ ಹೋದದ್ದು ನರ್ಮದಾ ನದಿ ದಂಡೆಯಲ್ಲಿದ್ದ ಮಹಿಷಮಂಡಲಕ್ಕೇ, ಮಹದೇವನನ್ನು ಮಹಿಷಮಂಡಲಕ್ಕೆ ಕಳುಹಿಸುವಂತೆ ಶಿಫಾರಸು ಮಾಡಿದವಳು ಅಶೋಕನ ಪಟ್ಟ ಮಹಿಷಿಯಾಗಿದ್ದ ವಿದಿಶಾದೇವಿ ಶಾಕ್ಯ ಕುಮಾರಿಯೇ ಎಂಬ ಮಾಹಿತಿ ಕೂಡ ಮಹಾವಂಶದಲ್ಲೇ ಉಲ್ಲೇಖಿಸಲ್ಪಟ್ಟಿದೆ. ಸಾಂಚಿ ಸ್ತೂಪದ ನಿರ್ಮಾಣವಾದದ್ದೂ ಈಕೆಯ ಸಲಹೆಯಿಂದಲೇ, ಇರಲಿ. ಈ ವಿದಿಶಾದೇವಿಯು ಮೂಲತಃ ಶಾಕ್ಯ ವಂಶಸ್ಥಳೇ, ಕೋಸಲ ಸಾಮ್ರಾಜ್ಯದ ವಿಡೂಡಭ ಶಾಕ್ಯರನ್ನೆಲ್ಲ ಹೊಸಕಿ ಹಾಕುವಾಗ, ಅವನ ಹೆದರಿಕೆಯಿಂದ ವಿದಿಶಾದೇವಿಯ ಪೂರ್ವಿಕರು ಕಪಿಲವಸ್ತುವನ್ನು ತೊರೆದು, ನರ್ಮದಾ ನದಿ ದಂಡೆಯ ಮಹಿಷಮಂಡಲಕ್ಕೆ ಬಂದು ನೆಲೆಸಿದ್ದರು. (ರಾಧಾ ಕುಮುದ್ ಮುಖರ್ಜಿ), ಈ ಮಹಿಷಮಂಡಲದಲ್ಲಿ ದಂಗೆಯೆದ್ದಾಗ, ಬಿಂದುಸಾರ ಅಶೋಕನನ್ನು ದಂಗೆಯಡಗಿಸಿ ಬರುವಂತೆ ಮಹಿಷಮಂಡಲಕ್ಕೆ ಕಳುಹಿಸುತ್ತಾನೆ.

ಈ ಸಂದರ್ಭದಲ್ಲೇ ಅಶೋಕನಿಗೆ ವಿದಿಶಾದೇವಿ ಪರಿಚಯವಾಗಿ ಪ್ರೇಮಾಂಕುರವಾದದ್ದು. ಈಕೆಯ ಮಕ್ಕಳೇ ಮಹೇಂದ್ರ ಮತ್ತು ಸಂಘಮಿತ್ರ, ವಂಶಮೂಲದಿಂದಲೇ ಬೌದ್ಧಳಾಗಿದ್ದ ವಿದಿಶಾದೇವಿ ತನ್ನ ತವರೂರಲ್ಲಿ ಬೌದ್ಧಧರ್ಮ ಹಬ್ಬಲಿ ಎಂಬ ಉದ್ದೇಶದಿಂದಲೇ ಮಹದೇವ ತೇರಾನನ್ನು ಮಹಿಷಮಂಡಲಕ್ಕೆ ಕಳುಹಿಸಿದ್ದು, ಕೆಲಕಾಲದ ಅನಂತರ ಮಹದೇವ ತೇರಾ ಪುನಃ ಪಾಟಲೀಪುತ್ರಕ್ಕೇ ವಾಪಸ್ಸಾದದ್ದಲ್ಲದೇ ಬೌದ್ಧ ಇತಿಹಾಸದಲ್ಲಿ ಮೊದಲ ಬಾರಿಗೆ ಬೌದ್ಧ ಧರ್ಮವನ್ನು ವಿಭಜಿಸಿದ ಕುಖ್ಯಾತಿಗೂ ಒಳಗಾದ. 'ಮಹಾಸಾಂಘಿಕ' ಶಾಖೆ ಈತನದ್ದೇ :ಡಿಚಿಟಿ ಖುಟಿಜ!

ಮಹದೇವ ತೇರಾ ಮೈಸೂರಿನ ಮಹಿಷಮಂಡಲಕ್ಕೂ ಬಂದಿದ್ದನೆಂಬ ಮಾತನ್ನೂ ಈಗ ಒಂದಿಷ್ಟು ಪರಿಶೀಲಿಸುವ: ಮೊದಲನೆಯದಾಗಿ ಮಹದೇವ ಕರುಣಾಮೈತ್ರಿಯ ಸಂದೇಶದ ಬೌದ್ಧ ಪ್ರಚಾರಕನಾಗಿಯೇ ತಾನೆ ಮೈಸೂರಿಗೆ ಬಂದಿದ್ದದ್ದು? ಅದನ್ನು ಬಿಟ್ಟು ಆತ ರಾಜ್ಯವನ್ನೇಕೆ ನಿರ್ಮಿಸಿದ? ಮತ್ತು ರಾಜ್ಯ ಸ್ಥಾಪಿಸಿದ್ದಾದರೂ ಎಲ್ಲಿ? ಯಾಕೆಂದರೆ ಕ್ರಿಪೂ. 3ನೇ ಶತಮಾನದಲ್ಲಿ ಈ ಭಾಗದಲ್ಲಿ ಪುನ್ನಾಟರು ರಾಜ್ಯವಾಳುತ್ತಿದ್ದರೆಂಬ ವಿವರವಾದ ಅಂಶಗಳನ್ನು ಈಗಾಗಲೇ ಗಮನಿಸಿದ್ದೇವಲ್ಲ? ಪುನ್ನಾಟರನ್ನೀತ ಬದಲಿಸಿದ್ದಲ್ಲಿ ಅನಂತರವೂ ಅಲ್ಲೇ ಮುನ್ನಾಟಿರು ಮುಂದುವರೆದಿದ್ದಾದರೂ ಹೇಗೆ? ಇರಲಿ. ಮಹದೇವ ಸ್ಥಾಪಿಸಿದ ರಾಜ್ಯದ ರಾಜವಂಶದ ಹೆಸರೇನಾಗಿತ್ತು? ಮಹದೇವನ ಅನಂತರ ಅದು ಮುಂದುವರೆಯಿತೇ ಅಥವ ಇಲ್ಲವೇ? ಇಲ್ಲವೆಂದಾದರೆ ಯಾಕೇ? ಮುಂದುವರೆದಿದ್ದ ಪಕ್ಷದಲ್ಲಿ ಅದು ಕರ್ನಾಟಕದ ಇತಿಹಾಸದಲ್ಲಿ ದಾಖಲಾಗಲೇ ಇಲ್ಲವೇಕೆ? ಮಹದೇವ ಅನೇಕ ಆರ್ಯಾವರ್ತದ ರಾಜರನ್ನೆಲ್ಲ ಸೋಲಿಸಿ ಬಲಿಷ್ಠ ದ್ರಾವಿಡ ಸಾಮಾಜ್ಯವನ್ನು ಕಟ್ಟಿದನೆಂಬ ಮಾತೂ ಇದೆಯಲ್ಲವೇ? ಯಾವ ಆರ್ಯ ರಾಜರನ್ನೀತ ಸೋಲಿಸಿದ?! ಯಾಕೆಂದರೆ ಕಂದಹಾರ್‌ನಿಂದ ಹಿಡಿದು ಬಾಂಗ್ಲಾದವರೆಗೂ ಹಾಗೂ ಉತ್ತರ ತುದಿಯಿಂದ ಹಿಡಿದು ಉತ್ತರ ಕರ್ನಾಟಕದವರೆಗೂ ವಿಶಾಲವಾಗಿ ವ್ಯಾಪಿಸಿದ್ದದ್ದು ಅಶೋಕನ ಮೌರ್ಯ ಸಾಮ್ರಾಜ್ಯವೊಂದೇ, ದಕ್ಷಿಣದಲ್ಲಿದ್ದದ್ದು ಚೋಳ, ಚೇರ, ಪಾಂಡ್ಯರಂತಹ ದ್ರಾವಿಡ ರಾಜ್ಯಗಳೇ. ಹೀಗಿರುವಾಗ ಮಹದೇವ ಆಗ ಅಧಿಕಾರದಲ್ಲಿದ್ದ ಏಕೈಕ ಆರ್ಯ ರಾಜನಾದ ಅಶೋಕನ ವಿರುದ್ಧವಷ್ಟೇ ಯುದ್ಧ ಮಾಡಲು ಸಾಧ್ಯವಿದ್ದದ್ದು! ಇದು ಅಸಂಭವದಲ್ಲಿ ಅಸಂಭವ, ಅದಿರಲಿ. ಪಾಟಲೀಪುತ್ರದ ಆರ್ಯ ಕುಲೀಯ ವ್ಯಾಪಾರಿ ಮನೆತನದ ಮಹದೇವ ಯಾವಾಗ ಮತ್ತು ಹೇಗೆ ದ್ರಾವಿಡನಾದ? ಅಹಿಂಸಾತತ್ವದ ಈತ ಹಿಂಸಾತ್ಮಕ ಯುದ್ಧ ಮಾಡಿದ್ದನ್ನಾದರೂ ಕಲ್ಪಿಸಿಕೊಳ್ಳುವುದು ಸಾಧ್ಯವೇ? ಈ ಅಂಶಗಳು ನಿಜವೇ ಆಗಿದ್ದಲ್ಲಿ ಎಲ್ಲೂ ಯಾಕೆ ಚಾರಿತ್ರಿಕ ನೆಲೆಗಳಲ್ಲಿ ದಾಖಲಾಗಿಲ್ಲ?

ಮಹಿಷಾಸುರನೆಂದರೆ ಕಕೇಷಿಯನ್ ಆರ್ಯರ ಮೂಲ ಪುರುಷರಲ್ಲಿ ಒಬ್ಬನಾದ, ನಿರ್ದಿಷ್ಟವಾಗಿ ಹೇಳುವುದಾದಲ್ಲಿ ಖಟಚಿತುಭಿ ಔಟಜ ಘುಜಟಚಿಟಿ (ಂಟ–ಒಚಿಠಿಣಜು– ಂಡಿಚಿಭುಚಿಟಿ ಖಿಡಿಚಿತುಟಟಜಡಿ) ಕಶ್ಯಪನ ಮರಿಮೊಮ್ಮಗನೂ ಹೌದು, ಹಾಗೆಯೇ ಬೃಹತ್ ನಂದಿಕೇಶ್ವರ ಹಾಗೂ ತಮಿಳಿನ ಅರುಣಾಚಲ ಪುರಾಣಗಳ ಪ್ರಕಾರ ಸ್ವತಃ ಶಿವನೂ ಹೌದು. ಆದರೆ ಮಹಿಷಾಸುರ ಮರ್ದಿನಿ ಪುರಾಣ ಸೃಷ್ಟಿಯ ಉದ್ದೇಶ ಮೂಲದಲ್ಲಿ–ವರುಣ ಅರ್ಥಾತ್ ಅಹುರ್‌ಮಜ್ದಾನೇ ಮಹಿಷಾಸುರ! ಪರ್ಷಿಯನ್ ಮಜ್ದಾ ಎಂಬ ಪದ ಸಂಸ್ಕೃತದಲ್ಲಿ ಮಹಸ್ ಎಂದಾಗುತ್ತದೆ. ಮಹಸ್‌ಅಸುರನೇ ಮಹಿಷಾಸುರ, ಅವಸ್ತಾದ ಪ್ರಾಚೀನ ಪ್ರಯೋಗಗಳಲ್ಲಿ ಮಜ್ಞಿಷ್ಟಾಹುರ ಎಂಬ ನಾಮಪದದ ಬಳಕೆ ವರುಣನಿಗಿದೆ. ಈ ಮಜ್ಞಿಷ್ಟಾ ಆಹುರ (ಅಂದರೆ ಅಸುರ – ಪರ್ಷಿಯನ್ ಭಾಷೆಯ 'ಹ' ಕಾರ 'ಜ' ಕಾರಗಳು ಸಂಸ್ಕೃತದಲ್ಲಿ 'ಸ ಕಾರಗಳಾಗುತ್ತವೆ.) ನನ್ನೇ ಸಂಸ್ಕೃತದಲ್ಲಿ ಮಹಿಷಾಸುರನೆಂದು ಕರೆಯಲಾಗುತ್ತದೆ. ಅನೇಕ ಇಂಡಾಲಜಿಸ್ಟರು ಮಹಿಷಾಸುರ ಹಾಗೂ ವೈದಿಕ ದುರ್ಗಿಯ ಯುದ್ಧವನ್ನು ಯಜ್ಞಾಚರಣೆಯ ದೇವಾರಾಧಕರಿಗೂ ಮತ್ತು ತಪೋ ಆಚಾರಣೆಯ ಮಜ್ದಾಸುರ ಆರಾಧಕರಿಗೂ ನಡುವೆ ಮುಂದುವರೆಯುತ್ತಲೇ ಬಂದ ದಾಯಾದಿ ಹಗೆತನವನ್ನಾಗಿಯೇ ಗುರುತಿಸಿದ್ದಾರೆ. ಮಹಿಷ ಪುರಾಣದಲ್ಲಿ ಮಹಿಷಾಸುರ ಇಂದ್ರಾದಿ ದೇವರುಗಳನ್ನು ಸ್ವರ್ಗದಿಂದ ಓಡಿಸುವುದು ಕೂಡ ಅಹುರ್‌ಮಜ್ದಾನ ಅನುಯಾಯಿ ರಾಜರು ಇಂದ್ರದೇವರುಗಳನ್ನು ಆರ್ಯನ್ ವೆಜಾ▯ದಿಂದ ಓಡಿಸಿದ್ದರ ತದ್ವತ್ತು ನಿರೂಪಣೆಯಾಗಿದೆ. ವೈದಿಕ ಪುರಾಣಗಳಲ್ಲಿನ ಅಸುರರ ವಧೆಗಳೆಲ್ಲವೂ ಪ್ರತಿಮಾತ್ಮಕವಾಗಿ ಪಾರ್ಸಿಗಳ ಹಾಗೂ ಅವರ ಸರ್ವಶಕ್ತ ಅಹುರ್‌ಮಜ್ದಾನ ಚಾರಿತ್ರ್ಯಹನನದ ಕಥಾನಕಗಳೇ ಆಗಿವೆ.

ಮಧ್ಯ ವಿಷ್ಯಾದ ಮಸ್ಸಾಜಟಾದ (ಜಾಟ್ ಮೂಲದವರು) ರಾಣಿ ಟೊಮಿರಿಸ್ ಪರ್ಷಿಯಾದ ಸೈರಸ್ ರಾಜನನ್ನು ಕೊಂದದ್ದರಿಂದ ಆಕೆಯನ್ನೂ ಕೂಡ ಮಹಿಷಾಸುರ ಮರ್ದಿನಿ ಎಂದೇಕಮ ಶತಮಾನಗಳ ಕಾಲ ಕರೆಯಲಾಗುತ್ತಿತ್ತು. ಹಾಗೆಯೇ ಅಲೆಕ್ಸಾಂಡರ್ ಪರ್ಷಿಯನ್ ರಾಜ ಡೇರಿಯಸ್‌ನನ್ನ ಕೊಂದದ್ದರಿಂದ ಆತನನ್ನು ಮತ್ತು ಆತನೊಂದಿಗೆ ಸಮೀಕರಿಸಲ್ಪಟ್ಟಿದ್ದ ಸ್ಕಂದನನ್ನೂ ಮಹಿಷಾಸುರ ಮರ್ದನ ಎಂದೇ ಕರೆಯಲಾಗುತ್ತದೆ. ಅಂದರೆ, ಮೂಲದಲ್ಲಿ ಮಹಿಷಾಸುರನಾಗಿದ್ದ ಮಜ್ದಾಹುರನ ಧರ್ಮದ ಅನುಯಾಯಿ ರಾಜರು ಇವರಾದ್ದರಿಂದಲೇ ಇವರನ್ನು ಸಾಂಕೇತಿಕವಾಗಿ ಮಹಿಷಾಸುರರು ಎಂದು ಭಾವಿಸಲಾಗಿತ್ತೆಂಬುದಕ್ಕೆ ಈ ಪ್ರಸಂಗಗಳೇ ಸಾಕ್ಷಿ.

ಮಹಿಷಾಸುರ ಮರ್ದಿನಿಯ ಪುರಾಣವು ಮೊದಲು ಹಬ್ಬಿದ್ದೇ ಪಾರ್ಸಿಗಳ ಇರಾನ್ ಮತ್ತು ಅಫ್ಘಾನಿಸ್ತಾನಗಳಲ್ಲೇ. ಅತ್ಯಂತ ಪ್ರಾಚೀನವಾದ ಮಹಿಷಾಸುರ ಮರ್ದಿನಿಯ ಪ್ರತಿಮೆಗಳು ಉತ್ತರ ಇರಾನಿನ ಡೇಲಾಮನ್‌ನಲ್ಲೂ ಇನ್ನಿತರೆಡೆಗಳಲ್ಲೂ ಸಿಕ್ಕಿವೆ, ಝೊರಾಷ್ಟ್ರಿಯನ್ ಧರ್ಮವು ನೆಲೆಸಿದ್ದ ಹಾಗೂ ಪ್ರಬಲವಾಗಿದ್ದೆಡೆಯಲ್ಲೇ ಈ ಪುರಾಣವನ್ನು ಮೊದಲು ಹಬ್ಬಿಸಲಾಯಿತೆಂಬುದೇ ವೈದಿಕರ ಮಜ್ದಾಹುರನ ಬಗೆಗಿನ ಹಗೆತನ, ದಾಯಾದಿ ಮತ್ಸರಕ್ಕೆ ಸಾಕ್ಷಿ. ವಿಚಿತ್ರವೇನೆಂದರೆ ಮಹಿಷಾಸುರ ಒಬ್ಬ ದ್ರಾವಿಡ, ಬೌದ್ಧ ಭಿಕ್ಕು ಅಂತ ನಂಬಿರುವವರು ಒಂದು ಕಡೆಯಿದ್ದರೆ, ಮತ್ತೊಂದು ಕಡೆ ಈ ಪಾರ್ಸಿ–ವೈದಿಕರ ದೇವ–ಅಸುರರ ಸಮರವು ತೇರಾವಾದದ ಸಾಹಿತ್ಯದಲ್ಲೂ ನುಸುಳಿದೆ! ಅಲ್ಲೂ ಬೌದ್ಧರ ಅಸುರ ವಿರೋಧಿ ಧೋರಣೆಯೇ ಮುಂದುವರೆದಿದೆ. ತಾತ್ವಿಕವಾಗಿ ಬೌದ್ಧ ಧರ್ಮ ಮಹಿಷಾಸುರ ವಿರೋಧವನ್ನು ಒಳಗೊಂಡಿದ್ದರೂ ನಾವು ಮಹಿಷನೇ ಬೌದ್ಧ ಎಂದು ನಂಬುವುದು ವಿರೋಧಾಭಾಸವಲ್ಲವೇ? ಇಲ್ಲಿ ಮಹಿಷ ಮತ್ತು ದುರ್ಗಿಯರ ನಡುವೆ ಯಾರು ಒಳಿತಿನ ಪರ ಅಥವಾ ಯಾರು ಕೆಡುಕಿನವರು ಎಂಬುದು ಎರಡನೆಯ ಪ್ರಶ್ನೆ, ಆದರೆ ಮಹಿಷನ ಪರವಹಿಸುವುದು ಅಂದರೆ, ಖಂಡಿತವಾಗಿಯೂ ಅದು ಆರ್ಯ–ಪಾರ್ಸಿಗಳ ಸರ್ವಶಕ್ತನಾದ ಅಹುರ್‌ಮಜ್ದಾನ ಪರವಾಗಿಯೂ, ಝೊರಾಷ್ಟ್ರಿಯನ್ ಧರ್ಮದ ಪರವಾಗಿಯೂ ನಿಲ್ಲುವುದೆಂದೇ ಅರ್ಥ. ಇದು ನಿಸ್ಸಂದಿಗ್ಧವಾದ ಮಾತು.

ಆಕರ :ಅಂಬೇಡ್ಕರ್‌ವಾದ



ಆಯುಧ ಪೂಜೆಗೆ ಇನ್ನೆರಡೇ ದಿನ ಬಾಕಿ:

ಹುಳಿಯಾರು ಮಾರುಕಟ್ಟೆಗೆ ಬಂದಿಳಿದ ಬೂದುಗುಂಬಳದ ರಾಶಿ

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ ತಾಲೂಕು ಹಾಗೂ ಹುಳಿಯಾರ್ ಪಟ್ಟಣದಲ್ಲಿ ಆಯುಧ ಪೂಜೆಗೆ ಇನ್ನೆರಡೇ ದಿನ ಬಾಕಿ



ಉಳಿದಿದ್ದು, ಹಬ್ಬದ ಸಂಭ್ರಮಕ್ಕೆ ಮಾರುಕಟ್ಟೆಯೂ ಸಜ್ಜಾಗುತ್ತಿದೆ. ಆಯುಧ ಪೂಜೆಯಂದು ವಾಹನಗಳು, ಯಂತ್ರೋಪಕರಣಗಳು ಹಾಗೂ ವಿವಿಧ ಪರಿಕರಗಳಿಗೆ ಪೂಜೆ ಸಲ್ಲಿಸಿ ಕುಂಬಳಕಾಯಿ ಒಡೆಯುವ ಸಂಪ್ರದಾಯವಿರುವುದರಿಂದ ಬೂದುಗುಂಬಳಕ್ಕೆ ಬೇಡಿಕೆ ಹೆಚ್ಚಿದೆ. ಇದರ ಪರಿಣಾಮವಾಗಿ ಹುಳಿಯಾರು ಪಟ್ಟಣದ ವಿವಿಧೆಡೆ ಕುಂಬಳಕಾಯಿಗಳ ರಾಶಿಯೇ ಕಾಣಸಿಗುತ್ತಿದ್ದು, ವ್ಯಾಪಾರ ವಹಿವಾಟು ಚುರುಕುಗೊಳ್ಳುತ್ತಿದೆ.

ಪಟ್ಟಣದ ಬಸ್ ನಿಲ್ದಾಣದ ಸುತ್ತಮುತ್ತ ಐದಾರು ಕಡೆ, ರಾಮಗೋಪಾಲ್ ಸರ್ಕಲ್, ಕನಕದಾಸ ಸರ್ಕಲ್ ಹಾಗೂ ಐಬಿ ಮುಂಭಾಗ ಸೇರಿದಂತೆ ಹಲವು ಸ್ಥಳಗಳಲ್ಲಿ ಕುಂಬಳಕಾಯಿ ಮಾರಾಟ ಆರಂಭವಾಗಿದೆ. ಸದ್ಯ ಕೆ.ಜಿ.ಗೆ ₹30ರಂತೆ ಬೂದುಗುಂಬಳ ಮಾರಾಟವಾಗುತ್ತಿದ್ದು, ಗಾತ್ರಕ್ಕೆ ಅನುಗುಣವಾಗಿ ಒಂದು ಕುಂಬಳಕಾಯಿಗೆ ₹50ರಿಂದ ₹100ರವರೆಗೆ ದರವಿದೆ. ಚಿಕ್ಕ ಗಾತ್ರದ ಕುಂಬಳಕಾಯಿಗೆ ₹50 ಹಾಗೂ ದೊಡ್ಡ ಗಾತ್ರದ ಕುಂಬಳಕಾಯಿಗೆ ₹100 ನಿಗದಿಪಡಿಸಲಾಗಿದೆ.

ಸ್ಥಳೀಯ ಬೆಳೆಗಾರರಿಂದಲೇ ಪೂರೈಕೆ: ಹುಳಿಯಾರು ಸುತ್ತಮುತ್ತಲಿನ ಯಳನಾಡು, ಸೂರಗನಹಳ್ಳಿ, ನಂದಿಹಳ್ಳಿ ಹಾಗೂ ಕಲ್ಲಹಳ್ಳಿ ಭಾಗಗಳಲ್ಲಿ ಬೆಳೆದ ಕುಂಬಳಕಾಯಿಗಳು ಸ್ಥಳೀಯ ಮಾರುಕಟ್ಟೆಗೆ ಬರುತ್ತಿವೆ. ವ್ಯಾಪಾರಿಗಳು ರೈತರಿಂದ ಖರೀದಿಸಿ ತಂದು ಮಾರಾಟ ಮಾಡುತ್ತಿದ್ದರೆ, ಹಬ್ಬದ ಹಿಂದಿನ ದಿನ ಕೆಲವು ರೈತರು ಟ್ರ್ಯಾಕ್ಟರ್, ಟಾಟಾ ಏಸ್ ಹಾಗೂ ಆಟೋಗಳಲ್ಲಿ ನೇರವಾಗಿ ಪಟ್ಟಣಕ್ಕೆ ಬಂದು ಮಾರಾಟ ಮಾಡುವುದು ವಾಡಿಕೆ. ಕಳೆದ ವರ್ಷವೂ ಹಳ್ಳಿಹಳ್ಳಿಗಳಿಂದ ರೈತರು ಕುಂಬಳಕಾಯಿ ತಂದು ಮಾರಾಟ ಮಾಡಿದ್ದರು.

ಪ್ರತಿ ವರ್ಷ ಹಬ್ಬಕ್ಕೆ ನಾಲ್ಕೈದು ದಿನ ಮುಂಚಿತವಾಗಿ ಮಾರುಕಟ್ಟೆಗೆ ಕುಂಬಳಕಾಯಿ ಆಗಮಿಸುತ್ತದೆ. ಆದರೆ ಈ ಬಾರಿ ಹಬ್ಬಕ್ಕೂ ಮುನ್ನವೇ ಸಾಕಷ್ಟು ಪ್ರಮಾಣದಲ್ಲಿ ಕುಂಬಳಕಾಯಿಗಳು ಬಂದಿಳಿದಿರುವುದು ವ್ಯಾಪಾರಿಗಳಲ್ಲಿ ಬೆಲೆ ಕುಸಿತದ ಆತಂಕ ಮೂಡಿಸಿದೆ. ಕಳೆದ ವರ್ಷ ಉತ್ತಮ ಬೆಲೆ ದೊರೆತಿದ್ದರೂ, ಈ ಬಾರಿ ಪೂರೈಕೆ ಹೆಚ್ಚಿರುವುದರಿಂದ ನಿರೀಕ್ಷಿತ ಲಾಭ ಸಿಗುತ್ತದೆಯೇ ಎಂಬ ಚಿಂತೆ ವ್ಯಾಪಾರಿಗಳನ್ನು ಕಾಡುತ್ತಿದೆ.

ಗೌರಿಬಿದನೂರು ಭಾಗದಲ್ಲಿ ಕುಂಬಳಕಾಯಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಅಲ್ಲಿ ಬೆಳೆಯುವ ಸ್ಥಳದಲ್ಲಿಯೇ ಕೆ.ಜಿ.ಗೆ ಸುಮಾರು ₹20ಕ್ಕೆ ಖರೀದಿಸಿದರೂ ಸಾಗಣೆ ಸೇರಿದಂತೆ ಇತರೆ ವೆಚ್ಚಗಳನ್ನು ಸೇರಿಸಿದಾಗ ಕೆ.ಜಿ.ಗೆ ₹30ಕ್ಕೆ ಮಾರಾಟ ಮಾಡಿದರೂ ಹೆಚ್ಚಿನ ಲಾಭ ಉಳಿಯುವುದಿಲ್ಲ ಎಂದು ವ್ಯಾಪಾರಿಗಳು ಹೇಳುತ್ತಾರೆ. ಹೀಗಾಗಿ ಬೆಲೆ ಮತ್ತಷ್ಟು ಇಳಿಸುವುದು ಕಷ್ಟ ಎಂಬುದು ಅವರ ಅಭಿಪ್ರಾಯ.

ಸೋಮವಾರ ಹಾಗೂ ಆಯುಧ ಪೂಜೆಯ ದಿನ ಕುಂಬಳಕಾಯಿಗೆ ಬೇಡಿಕೆ ಹೆಚ್ಚಾಗಿ ಬೆಲೆ ಉತ್ತಮವಾಗಬಹುದು ಎಂಬ ನಿರೀಕ್ಷೆಯನ್ನು ವ್ಯಾಪಾರಿಗಳು ಹೊಂದಿದ್ದಾರೆ. ಆದರೆ ಮಾರುಕಟ್ಟೆಗೆ ಇನ್ನಷ್ಟು ಕುಂಬಳಕಾಯಿ ಬಂದಿಳಿದರೆ ದರದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದನ್ನು ಕಾದುನೋಡಬೇಕಿದೆ.

ಹೂವಿನ ಬೆಲೆ ಈಗಾಗಲೇ ಏರಿಕೆ: ಆಯುಧ ಪೂಜೆಗೆ ಕುಂಬಳಕಾಯಿಯಷ್ಟೇ ಅಲ್ಲದೆ ಹೂವುಗಳಿಗೂ ಹೆಚ್ಚಿನ ಬೇಡಿಕೆಯಿದೆ. ವಾಹನಗಳು, ಮನೆಗಳು ಹಾಗೂ ಅಂಗಡಿಗಳ ಅಲಂಕಾರಕ್ಕೆ ಹೂವು ಅಗತ್ಯವಾಗಿರುವುದರಿಂದ ಹಬ್ಬಕ್ಕೂ ಮುನ್ನವೇ ಬೆಲೆ ಏರಿಕೆಯಾಗಿದೆ. ಸದ್ಯ ಶಾವಂತಿಗೆ ಹೂವು ಮಾರೊಂದಕ್ಕೆ ₹100 ದಾಟಿದ್ದು, ಹಬ್ಬದ ದಿನ ₹150ರಿಂದ ₹200ರವರೆಗೆ ಏರಿಕೆಯಾಗುವ ನಿರೀಕ್ಷೆಯಿದೆ. ಬಿಡಿ ಹೂವುಗಳ ಬೆಲೆಯೂ ಕೆ.ಜಿ.ಗೆ ₹300–400 ರೂ ದಾಟಿದ್ದು ಇನ್ನು ಹೆಚ್ಚಾಗಲಿದೆ ಎನ್ನುತ್ತಾರೆ ಹೂವಿನ ವ್ಯಾಪಾರಿ ಶಾರದಮ್ಮ.

ಇನ್ನೊಂದೆಡೆ, ಹಣ್ಣುಗಳ ಬೆಲೆ ಸದ್ಯಕ್ಕೆ ಹೆಚ್ಚಿನ ಬದಲಾವಣೆ ಕಾಣದೆ ಸ್ಥಿರವಾಗಿದೆ. ಸೇಬು ಕೆ.ಜಿ.ಗೆ ₹160, ಮೋಸಂಬಿ ಮತ್ತು ಕಿತ್ತಳೆ ಕೆ.ಜಿ.ಗೆ ₹100 ಹಾಗೂ ಪುಟ್ಟ ಬಾಳೆಹಣ್ಣು ಕೆ.ಜಿ.ಗೆ ₹100ರಂತೆ ಮಾರಾಟವಾಗುತ್ತಿವೆ.

ಒಟ್ಟಿನಲ್ಲಿ, ಆಯುಧ ಪೂಜೆಯ ಹಿನ್ನೆಲೆಯಲ್ಲಿ ಹುಳಿಯಾರು ಮಾರುಕಟ್ಟೆಯಲ್ಲಿ ಕುಂಬಳಕಾಯಿ ವ್ಯಾಪಾರ ಕಳೆಗಟ್ಟಿದ್ದು, ಹಬ್ಬದ ದಿನದ ಬೇಡಿಕೆ ಹಾಗೂ ಬೆಲೆ ಏರಿಕೆಯ ಲೆಕ್ಕಾಚಾರದಲ್ಲಿ ವ್ಯಾಪಾರಿಗಳು ತೊಡಗಿದ್ದಾರೆ.

"ಹಬ್ಬದ ದಿನ ಬೇಡಿಕೆ ಹೆಚ್ಚುವ ನಿರೀಕ್ಷೆ"

ಹಬ್ಬಕ್ಕೆ ಇನ್ನೂ ಎರಡು ದಿನ ಬಾಕಿ ಇರುವುದರಿಂದ ಸೋಮವಾರ ಹಾಗೂ ಆಯುಧ ಪೂಜೆಯ ದಿನ ಕುಂಬಳಕಾಯಿಗೆ ಬೇಡಿಕೆ ಹೆಚ್ಚಾಗಿ ಉತ್ತಮ ಬೆಲೆ ಸಿಗಬಹುದು ಎಂಬ ನಿರೀಕ್ಷೆಯಿದೆ. :

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ನೀರು ಸರಬರಾಜು ವ್ಯತ್ಯಯವಾಗದಂತೆ ಕ್ರಮ:

ಜನವರಿಗೆ ಹೇಮಾವತಿ ನೀರು ಹರಿಸಲು ಸರ್ಕಾರಕ್ಕೆ ಒತ್ತಾಯ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ರಾಜ್ಯದಲ್ಲಿ ತೀವ್ರ ಬರಇದ್ದರೂತುಮಕೂರು ನಗರದಲ್ಲಿ ಕುಡಿಯುವ ನೀರಿಗೆ ಸಮಸ್ಯೆಆಗದಂತೆ ಎಚ್ಚರಿಕೆ ವಹಿಸಲಾಗಿದೆ. ಈಗ ಬುಗುಡನಹಳ್ಳಿ ಕೆರೆಯಲ್ಲಿ ಲಭ್ಯವಿರುವ ನೀರು ಜನವರಿವರೆಗೆ ಸಾಕಾಗಬಹುದು, ನಾಗರೀಕರಿಗೆ ತೊಂದರೆ ಆಗದಂತೆ ನೀರು ಪೂರೈಕೆ ಮಾಡಬೇಕು. ನೀರು ಶುದ್ಧೀಕರಣ ಘಟಕಗಳು ಹಾಗೂ ನೀರು ಪೂರೈಕೆ ಸಂಬಂಧಿಸಿದ ಯಂತ್ರಗಳು ಕೆಟ್ಟು ಹೋಗಿ ತೊಂದರೆ ಆಗದಂತೆ ಮುನ್ನೆಚ್ಚರ ವಹಿಸಬೇಕು, ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ನಗರಪಾಲಿಕೆಆಯುಕ್ತರು ಹಾಗೂ ಅಧಿಕಾರಿಗಳಿಗೆ ಗಂಭೀರಸೂಚನೆ ನೀಡಿರುವುದಾಗಿ ಶಾಸಕ ಜಿ.ಬಿ. ಜ್ಯೋತಿಗಣೇಶ್ ಹೇಳಿದರು.

ಶನಿವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಬುಗುಡನಹಳ್ಳಿ ಕೆರೆಯಲ್ಲಿ 272 ಎಂಸಿಎಫ್‌ಟಿ ನೀರು ಲಭ್ಯವಿದೆ, ಇದರಲ್ಲಿ 240 ಎಂಸಿಎಫ್‌ಟಿ ನೀರನ್ನು ಬಳಕೆ ಮಾಡಿಕೊಳ್ಳಬಹುದು. ಆದರೆಜನವರಿಆರಂಭದ ವೇಳೆಗೆ ತುಮಕೂರಿಗೆ ಹೇಮಾವತಿಜಲಾಶಯದಿಂದ ನೀರು ಹರಿಸಬೇಕು.ಇಲ್ಲವಾದರೆ ನಗರದಲ್ಲಿಕುಡಿಯುವ ನೀರಿಗೆತೊಂದರೆಆಗುತ್ತದೆಎಂದುಜಿಲ್ಲಾಉಸ್ತುವಾರಿ ಸಚಿವರು ಹಾಗೂ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ ಎಂದರು.

ನಗರದ ನೀರು ಸರಬರಾಜಿಗೆಂದು ಬುಗುಡನಹಳ್ಳಿ ಕೆರೆ, ಹೆಬ್ಬಾಕಕೆರೆ, ಅಮಾನಿಕೆರೆ, ಮರಳೂರು ಹಾಗೂ ಗಂಗಸಂದ್ರ ಕೆರೆಗಳನ್ನು ನಗರದ ನೀರು ಸಂಗ್ರಹ ಗಾರಗಳಾಗಿ ಬಳಸಲು ಉದ್ದೇಶಿಸಿದೆ, ಬುಗುಡನಹಳ್ಳಿ ಹಾಗೂ ಪಿಎನ್ ಆರ್ ಪಾಳ್ಯದ ನೀರು ಶುದ್ಧೀಕರಣ ಘಟಕಗಳ ಬಗ್ಗೆ ಅಧಿಕಾರಿಗಳು ಗಮನಹರಿಸಬೇಕು.ಯಂತ್ರಗಳು ಕೆಟ್ಟು ನೀರು ವಿತರಣೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕು.ಅಮಾನಿಕೆರೆ ನೀರನ್ನು ಶುದ್ಧೀಕರಿಸದೆ ಕುಡಿಯಲು ಕೊಡುತ್ತಿಲ್ಲ. ಆದರೆ ಅಮಾನಿ ಕೆರೆಯಲ್ಲಿ ನೀರು ಸಂಗ್ರಹವಾಗಿರುವ ಕಾರಣ ಸುತ್ತಮುತ್ತಲ



ಪ್ರದೇಶಗಳ ಕೊಳವೆಬಾವಿಗಳು ಜಲಾವೃತವಾಗಿ ನಗರದ ಶೇಕಡ 30ರಷ್ಟು ನೀರಿನ ಬೇಡಿಕೆಯ ಒತ್ತಡ ಕಡಿಮೆಯಾಗಿದೆ ಎಂದು ಹೇಳಿದರು. ನಗರಪಾಲಿಕೆಯ ಟಾಸ್ಕ್‌ಫೋರ್ಸ್ ಸಭೆಯಲ್ಲಿ ನೀರು ಸರಬರಾಜು ಬಗ್ಗೆ ಆಯುಕ್ತರು, ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದು, ನೀರಿನ ಸಮಸ್ಯೆಯಾಗದಂತೆ ಕಟ್ಟೆಚ್ಚರ ವಹಿಸಲು ಸೂಚನೆ ನೀಡಿದ್ದೇನೆ ಎಂದು ಹೇಳಿದ ಶಾಸಕ ಜ್ಯೋತಿಗಣೇಶ್, ನಗರದಲ್ಲಿ ಸುಮಾರು 837 ಕೊಳವೆ ಬಾವಿಗಳಿದ್ದು, ಅವುಗಳಲ್ಲಿ ಈಗ 719 ಕೊಳವೆಬಾವಿಗಳ ನೀರಿನ ಬಳಕೆ ಮಾಡಲಾಗುತ್ತದೆ. ಪಂಪ್‌ಸೆಟ್‌ಗಳು ಕೆಡದಂತೆ, ಕೆಟ್ಟರೆತಕ್ಷಣ ದುರಸ್ಥಿ ಮಾಡಲು ವ್ಯವಸ್ಥೆ ಮಾಡಿ ಕೊಳ್ಳಬೇಕು.ಜನ ಸಂಖ್ಯೆ ಏರುತ್ತಿದ್ದು ನಗರದಲ್ಲಿ ಇನ್ನೂ 15 ಓವರ್ ಹೆಡ್ ಟ್ಯಾಂಕ್‌ಗಳ ಅಗತ್ಯವಿದೆಎಂದರು.

ಕೆ.ಎಂ. ಸುರೇಶ್ ಗೆಲುವು ಖಚಿತ: ಆಗ್ನೇಯ ಪದವಿಧರರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಎಂ.ಸುರೇಶ್‌ಅವರ ಪರವಾಗಿ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಸ್ವಯಂ ಪ್ರೇರಿತವಾಗಿ ಪ್ರಚಾರ ಮಾಡುತ್ತಿದ್ದರೆ.ಈ ಕ್ಷೇತ್ರದಲ್ಲಿಇದೂವರೆಗೆ ಬಿಜೆಪಿ ಹಾಗೂ ಜೆಡಿಎಸ್ ಅಭ್ಯರ್ಥಿಗಳು ಮಾತ್ರಗೆದ್ದಿದ್ದು, ಈ ಬಾರಿ ಎರಡೂ ಪಕ್ಷಗಳ ಮೈತ್ರಿ ಅಭ್ಯರ್ಥಿ ಕಣದಲ್ಲಿದ್ದು ಎರಡೂ ಪಕ್ಷಗಳ ಕಾರ್ಯಕರ್ತರು ಕೆಲಸ ಮಾಡುತ್ತಿರುವುದರಿಂದ ನಮ್ಮಅಭ್ಯರ್ಥಿ ಹೆಚ್ಚಿನ ಮತಗಳ ಅಂತರದಿಂದ ಚುನಾಯಿತ ರಾಗುತ್ತಾರೆ. ಕೆ.ಎಂ. ಸುರೇಶ್‌ಅವರು ಸಂಭಾವಿತರು, ಶಿಕ್ಷಣ ಸಂಸ್ಥೆ ಹೊಂದಿದ್ದಾರೆ.ಅವರಿಗೆ ಶಿಕ್ಷಕರು ಹಾಗೂ ಪದವಿಧರರ ಸಮಸ್ಯೆಗಳ ಅರಿವಿದೆ ಎಂದು ಜ್ಯೋತಿ ಗಣೇಶ್ ಹೇಳಿದರು.

ವೃತ್ತದ ಸ್ವಾಮೀಜಿ ಹೆಸರು ಬದಲಾಗುವುದಿಲ್ಲ: ನಗರದ ಡಾ.ಶ್ರೀ ಶಿವಕುಮಾರ ಸ್ವಾಮೀಜಿಗಳ ವೃತ್ತದ ಹೆಸರನ್ನು ಬದಲಾವಣೆ ಮಾಡುವುದಿಲ್ಲ. ಬದಲಾವಣೆ ಮಾಡ ಬಾರದು ಎಂದು ತಾವು ಜಿಲ್ಲಾಧಿಕಾರಿಗಳು ಹಾಗೂ ನಗರ ಪಾಲಿಕೆ ಆಯುಕ್ತರೊಂದಿಗೆ ಮಾತನಾಡಿದ್ದು, ಬದಲಾವಣೆ ಮಾಡುವುದಿಲ್ಲ ಎಂದು ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ ಎಂದು ತಿಳಿಸಿದರು. ನಗರ ಪಾಲಿಕೆ ಮಾಜಿ ಮೇಯರ್ ಬಿ.ಜಿ. ಕೃಷ್ಣಪ್ಪ, ನಗರಸಭೆ ಮಾಜಿ ಉಪಾಧ್ಯಕ್ಷ ಹನುಂತರಾಯಪ್ಪ, ಮಾಜಿ ವಿಪಕ್ಷ ನಾಯಕ ಸಿ.ಎನ್. ರಮೇಶ್, ಮಾಜಿ ಸದಸ್ಯ ಹೆಚ್.ಮಲ್ಲಿಕಾರ್ಜುನ್, ಬಿಜೆಪಿ ಮುಖಂಡರಾದ ಟಿ.ಆರ್.ಸದಾಶಿವಯ್ಯ, ಕೆ.ವೇದಮೂರ್ತಿ, ಜೆ.ಜಗದೀಶ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಮನೆ ಕಟ್ಟಿಕೊಳ್ಳಲು ಜಾಗವಿಲ್ಲದೆ ಪರದಾಡುತ್ತಿದ್ದ ಬಡ ಕುಟುಂಬಗಳಿಗೆ ನಿವೇಶನ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ: ಸುಮಾರು 45 ವರ್ಷಗಳ ನಿರೀಕ್ಷೆಯ ನಂತರ ಐ ಡಿ ಹಳ್ಳಿ ಹೋಬಳಿಯ ತಾಡಿ ಗ್ರಾಮದಲ್ಲಿ ನಿವೇಶನ ರಹಿತ ಬಡ ಕುಟುಂಬಗಳಿಗೆ ಸ್ವಂತ ನಿವೇಶನ ಮತ್ತು ಮನೆ ನಿರ್ಮಿಸಿಕೊಳ್ಳುವ ವಾತಾವರಣವು ಸೃಷ್ಟಿಯಾಗುತ್ತಿದೆ.

ಗ್ರಾಮದಲ್ಲಿ ಕೆಲ ಆರ್ಹರಿಗೆ ಮನೆ ಕಟ್ಟಿಕೊಳ್ಳಲು ಜಾಗವಿಲ್ಲದೆ ಪರದಾಡುತ್ತಿದ್ದ ಬಡ ಕುಟುಂಬಗಳಿಗೆ ನಿವೇಶನ ಕಲ್ಪಿಸುವ ಉದ್ದೇಶದಿಂದ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದಲ್ಲಿರುವ ಜಾಗದಲ್ಲಿ ನಿವೇಶನಗಳ ಅಳತೆ ಕಾರ್ಯವನ್ನು ತಾಲೂಕು ಪಂಚಾಯಿತಿಯ ಸಿಬ್ಬಂದಿಗಳು ಸ್ಥಳ ಪರಿಶೀಲನೆ ನಡೆಸಿ,ನಿವೇಶನಗಳ ಅಳತೆ ಕಾರ್ಯ ನಡೆಸಿದರು.

ಈಗಾಗಲೇ ಗುರುತಿಸಿರುವ ಜಾಗದಲ್ಲಿ ಬೆಳೆದು ನಿಂತಿದ್ದ ಮುಳ್ಳಿನ ಗಿಡಗಳನ್ನು ತೆರವುಗೊಳಿಸಿ,ನಿವೇಶನಗಳ ಗಡಿಗಳನ್ನು ಗುರುತಿಸಿ ಕಲ್ಲುಗಳನ್ನು ಸಹ ಹಾಕಲಾಗಿದೆ. ಅಲ್ಲದೆ ನಿವೇಶನಗಳಿಗೆ ಸಂಖ್ಯೆಗಳನ್ನು ನೀಡುವ ಕಾರ್ಯವನ್ನೂ ಕೈಗೊಳ್ಳಲಾಯಿತು.

ಶಾಸಕ ಕೆ.ಎನ್.ರಾಜಣ್ಣನವರು ನಿವೇಶನ ರಹಿತ ಆರ್ಹ ಬಡ ಕುಟುಂಬಗಳನ್ನು ಗುರುತಿಸಿ ನಿವೇಶನ ಕಲ್ಪಿಸುವ ಉದ್ದೇಶದಿಂದ,ಹಲವು ವರ್ಷಗಳಿಂದ ಸ್ವಂತ ಸೂರಿನ ಕನಸು ಕಾಣುತ್ತಿರುವ ಕುಟುಂಬಗಳಲ್ಲಿ ಅಧಿಕಾರಿಗಳ ಈ ಕಾರ್ಯವು ಹೊಸ ಭರವಸೆಯೊಂದನ್ನು ಮೂಡಿಸಿದೆ.

ಮುಖಂಡ ಪಿ.ಟಿ.ಗೋವಿಂದಪ್ಪ ಮಾತನಾಡಿ, ಶಾಸಕರಾದ ಕೆ.ಎನ್ ರಾಜಣ್ಣನವರ ಸೂಚನೆಯಂತೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ನಿವೇಶನಗಳನ್ನು ಹಂಚಿಕೆ ಮಾಡಲು ಅಗತ್ಯ ಕ್ರಮಕೈಗೊಂಡಿದ್ದಾರೆ.ಇದೇ ಜಾಗವನ್ನು ಸುಮಾರು1980ರಲ್ಲಿ ಗ್ರಾಮದ ಆರ್ಹ ಬಡ ಕುಟುಂಬಗಳಿಗೆ ನಿವೇಶನ ಕಲ್ಪಿಸುವ ಉದ್ದೇಶದಿಂದ ಈ ಜಾಗವನ್ನು ಖರೀದಿಸಲಾಗಿತ್ತು.ಆದರೆ ಇಷ್ಟು ವರ್ಷಗಳಾದರೂ ನಿವೇಶನಗಳನ್ನಾಗಿ ಪರಿವರ್ತಿಸಲು ಈ ಹಿಂದಿನ ಶಾಸಕರುಗಳು ತಲೆ ಕೆಡಿಸಿಕೊಂಡಿರಲಿಲ್ಲ ಈಗ ಶಾಸಕರಾಗಿರುವ ಕೆ.ಎನ್. ರಾಜಣ್ಣನವರು ಹೆಚ್ಚು ಮುತುವರ್ಜಿ ವಹಿಸಿದ್ದರ ಫಲವಾಗಿ ಕಾಲವು ಸಹ ಕೂಡಿ ಬಂದಿದೆ.ಅಧಿಕಾರಿಗಳು ಈ ಅಳತೆ ಕಾರ್ಯವನ್ನು ಆರಂಭಿಸಿರುವುದು ಗ್ರಾಮಸ್ಥರಲ್ಲಿ ಸಂತಸ ತಂದಿದೆ.ಅಳತೆ ಕಾರ್ಯ ಪೂರ್ಣಗೊಂಡ ಬಳಿಕ ನಿಯಮಾನುಸಾರ ಅರ್ಹ ಫಲಾನುಭವಿಗಳನ್ನು ಗುರುತಿಸಿ ನಿವೇಶನ ಹಂಚಿಕೆ ಪ್ರಕ್ರಿಯೆಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎಂದರು.

ನಿವೇಶನಗಳ ಅಳತೆ ಕಾರ್ಯದಲ್ಲಿ ಇಓ ಉತ್ತಮ್ ಸಿಬ್ಬಂದಿಗಳಾದ ಇಂಜಿನಿಯರ್ ಸಾಧಿಕ್,ಕಮಲೇಶ್, ಸಾಯಿ ಕುಮಾರ್ ಹಾಗೂ ಗ್ರಾಮಸ್ಥರು ಇದ್ದರು.



ರಸ್ತೆ ಕಾಮಗಾರಿ ಅರ್ಧಕ್ಕೆ: ಟ್ರಾಫಿಕ್ ಜಾಮ್, ಗುಂಡಿ, ವೈಟ್ ಟ್ಯಾಪಿಂಗ್ ವಿಳಂಬ;

ಶೀಘ್ರ ಪೂರ್ಣಗೊಳಿಸಲು ಸಿಪಿಐ(ಎಂ) ಒತ್ತಾಯ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು ನಗರದ ಸುತ್ತಮುತ್ತಲಿನ ವರ್ತುಲ ರಸ್ತೆಗಳಲ್ಲಿ ಹಾಗೂ ರಾಷ್ಟ್ರೀಯ ಹೆದ್ದಾರಿ–48ರ ರಂಗಾಪುರದಲ್ಲಿ ನಡೆಯುತ್ತಿರುವ ಸೇತುವೆ ಕಾಮಗಾರಿಗಳು ಕಳೆದ ನಾಲ್ಕೈದು ರ್ಷಗಳಿಂದ ನಿಧಾನಗತಿಯಲ್ಲಿ ಸಾಗುತ್ತಿವೆ. ಇದರಿಂದ ಪ್ರತಿದಿನ ತೀವ್ರ ಟ್ರಾಫಿಕ್ ಜಾಮ್ ಉಂಟಾಗಿ ವಾಹನ ಸವಾರರು ಗಂಟೆಗಟ್ಟಲೆ ತೊಂದರೆ ಅನುಭವಿಸುತ್ತಿದ್ದಾರೆ. ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಸಂಬಂಧಪಟ್ಟ ಸಚಿವರು, ಲೋಕಸಭಾ ಸದಸ್ಯರು, ಶಾಸಕರು ಹಾಗೂ ಅಧಿಕಾರಿಗಳು ತರ್ತು ಕ್ರಮ ಕೈಗೊಳ್ಳದಿರುವುದನ್ನು ಸಿಪಿಐ(ಎಂ) ಕಟುವಾಗಿ ಟೀಕಿಸಿ ಖಂಡಿಸಿದೆ.

ಮಧುಗಿರಿ ಪಾವಗಡ ರಸ್ತೆಯ ತರಕಾರಿ ಮಾರುಕಟ್ಟೆ ಸಮೀಪದ ರಸ್ತೆ ಗುಂಡಿಗಳಿಂದ ವಾಹನ ಸವಾರರು ಹಾಗೂ ಸರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ರಸ್ತೆ ದುರವಸ್ಥೆಯಿಂದ ಅಪಘಾತಗಳು ಸಂಭವಿಸಿ ಪ್ರಾಣಹಾನಿ ಹಾಗೂ ಅಂಗವೈಕಲ್ಯ ಉಂಟಾಗುವ ಅಪಾಯವಿದೆ. ಸಮರ್ಪಕ ಬೀದಿದೀಪಗಳು ಹಾಗೂ ಚರಂಡಿ ವ್ಯವಸ್ಥೆಯ ಕೊರತೆಯೂ ಜನರ ಸಂಕಷ್ಟವನ್ನು ಹೆಚ್ಚಿಸಿದೆ.

ಅರ್ಧಕ್ಕೆ ನಿಂತ ವೈಟ್ ಟ್ಯಾಪಿಂಗ್ ಕೆಲಸ – ತಪ್ಪದ ಜನತೆ ಕಷ್ಟ; ಕೇಂದ್ರ ಸಚಿವರು ಅಬ್ಬರದ ಪ್ರಚಾರದ ಮೂಲಕ ಆರಂಭಿಸಿದ ಮಲ್ಲಸಂದ್ರ– ಬಡವಾಡಿ ರಸ್ತೆ ಕಾಮಗಾರಿಯು ಅರ್ಧಕ್ಕೆ ನಿಂತಿರುವುದು ವಾಹನ ಸವಾರರ ಸಂಕಷ್ಟ ಹೆಚ್ಚಿಸಿದೆ. ಈ ಕೆಲಸವನ್ನು ಆರಂಭಿಸಿ ಅರ್ಧಕ್ಕೆ ನಿಲ್ಲಿಸಲಾಗಿದ್ದೇಕೆ ಎಂದು ಸಿಪಿಐ(ಎಂ) ಪ್ರಶ್ನಿಸಿದ್ದು, ಕೆಲಸವನ್ನು ತ್ವರಿತಗತಿಯಲ್ಲಿ ಮುಗಿಸಿ ಜನತೆಯ ಸಂಕಷ್ಟ ಪರಿಹರಿಸುವಂತೆ ಒತ್ತಾಯಿಸಿದೆ.

ಭಾರತ ಕಮ್ಯುನಿಸ್ಟ್ ಪಕ್ಷ ಮಾಕ್ಸವಾಧಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸಭೆಯು ದಿನಾಂಕ 18–10–2026ರಂದು ಕಾಂ. ಬಿ. ಉಮೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯು ನಗರದ ಸಮಸ್ಯೆಗಳನ್ನು ಚರ್ಚಿಸಿ ತಿರ್ಮಾನಿಸಿತು. ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ. ಸೈಯದ್ ಮುಜೀಬ್, ಕಾಂ. ಕಮಲ, ಕಾಂ. ಲೋಕೇಶ್ ಉಪಸ್ಥಿತರಿದ್ದರು. ಸರ್ವಜನಿಕರು ಮತ್ತು ಸಿಪಿಐ(ಎಂ) ಪಕ್ಷವು ಹಲವು ಬಾರಿ ಪ್ರತಿಭಟನೆ ಹಾಗೂ ಮನವಿಗಳ ಮೂಲಕ ಗಮನ ಸೆಳೆದಿದ್ದರೂ ಶಾಶ್ವತ ಪರಿಹಾರ ದೊರಕಿಲ್ಲ. ಸಂಬಂಧಪಟ್ಟ ಕೇಂದ್ರ ಸಚಿವರು, ಸಂಸದರು, ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಅಧಿಕಾರಿಗಳು ಕಾಮಗಾರಿಗಳ ವಿಳಂಬಕ್ಕೆ ಕಾರಣಗಳನ್ನು ಬಹಿರಂಗಪಡಿಸಿ ಹೊಣೆಗಾರಿಕೆ ನಿಗದಿಪಡಿಸಬೇಕು. ಉತ್ಸವಗಳ ಸೌಂದರ್ಯೀಕರಣಕ್ಕಿಂತ ಜನರ ಜೀವ, ಸಂಚಾರ ಮತ್ತು ಸುರಕ್ಷತೆಗೆ ಸಂಬಂಧಿಸಿದ ಮೂಲಸೌರ್ಯಗಳಿಗೆ ಆದ್ಯತೆ ನೀಡಬೇಕೆಂದು ಜಿಲ್ಲಾಡಳಿತವನ್ನು ಸಿಪಿಐ(ಎಂ) ಒತ್ತಾಯಿಸಿದೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK -572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. GMAIL: suryapragathi2021@gmail.com.